# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XIV 8 ಆಗಸ್ಟ್ 1996

ಈ ಸಂಚಿಕೆಯಲ್ಲಿ


'ನೇಸರು' ಬಗ್ಗೆ ಬಂದ ಪತ್ರಗಳು 1

'. . . ರಿ ಪ್ರಸನ್ನ' - ಕತೆ ● ಉಮಾ ರಾವ್ 3

'ಕರ್ನಾಟಕ ಮಲ್ಲ'ದ ಸಂಪಾದಕ ಶ್ರೀ ಚಂದ್ರಶೇಖರ ಪಾಲೆತ್ತಾಡಿ
ಅವರೊಂದಿಗೆ ಸಂದರ್ಶನ ● ರೇಖಾ 5

ಅಧ್ಯಾತ್ಮ ಜೀವನ (ಸಂಗ್ರಹ) 7

Vocational Courses Make Careers ● Arjun B. 8

ಕವನ - ಚುಟುಕುಗಳು ● ಗೋಪಾಲ ತ್ರಾಸಿ 9

'ಜ್ಞಾನ ಪೀಠ' ಪ್ರಶಸ್ತಿ ವಿಜೇತ ಕನ್ನಡಿಗರು 6
ಅನಂತಮೂರ್ತಿಯವರ ಕಥಾ ಸಾಹಿತ್ಯ ಮತ್ತು
ಸಂಸ್ಕೃತಿ ವಿಘಟನೆ - ● ಕೆ. ರಘುನಾಥ 10

ಸಂಮೋಹಿನಿ ಚಿಕಿತ್ಸೆ -8 ● ಡಾ॥ ಉಷಾರಾವ್ 13

Development of Audio Visual Communications 15

ಸುತ್ತ ಮುತ್ತ . . . 16



The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 ● Grams: "KARUNADU"

## 'ನೇಸರು' ಬಗ್ಗೆ ಬಂದ ಪತ್ರಗಳು:

*ಹಲವು ತಿಂಗಳ ನಂತರ 'ನೇಸರು' ಬಗ್ಗೆ ಒಂದಿಷ್ಟು ಪತ್ರಗಳು ಬರತೊಡಗಿರುವುದು ಸಂತಸದ ಸುದ್ದಿ. ಓದುಗರ ಪ್ರತಿಕ್ರಿಯೆಗಳು ಪತ್ರಿಕೆಯ ಬೆಳವಣಿಗೆಗೆ ಅವಶ್ಯ. ಪತ್ರಗಳ ಮೂಲಕ ನಮ್ಮ ಕುಂದುಕೊರತೆ, ಸಾಧನೆ, ಹಳೆಯ ನೆನಪುಗಳತ್ತ ಗಮನ ಸೆಳೆದ ಎಲ್ಲರಿಗೂ 'ನೇಸರು' ಪರವಾಗಿ ಧನ್ಯವಾದಗಳು.*

*'ನೇಸರು' ವಿನ ಬಗ್ಗೆ ನಿಮ್ಮ ಅನಿಸಿಕೆಗಳನ್ನು ನಿರೀಕ್ಷೆಗಳನ್ನು ದಯವಿಟ್ಟು ತಿಳಿಸಿಕೊಡಿ.*

**- ಸಂಪಾದಕರು.**

ಶ್ರೀ ಪ್ರಸಾದ ಅವರಿಗೆ,

### 'ಜಯ್ಯಕ್ಕ ಇನ್ನಿಲ್ಲ'

ಕಳೆದ June '96ರ 'ನೇಸರು'ವಿನಲ್ಲಿ ಕಂಡ ಸುದ್ದಿಯು, ಬಹಳ ಮನಸ್ಸಿಗೆ ದುಃಖ ತಂದಿದೆ.

ಜಯ್ಯಕ್ಕ ನನ್ನ ಬಹು ದೂರದ ನೆಂಟರಾಗಿದ್ದರೂ, ನನಗೆ ಬಹಳ ಸಹಾಯ ಮಾಡಿದ್ದರು, ಹತ್ತಿರದವರಾಗಿದ್ದರು.

ಅಂದು ಸುಮಾರು 25 ವರ್ಷಗಳ ಹಿಂದೆ, Mysore Associationನವರು, ಒಂದು ಸಂಜೆ, Shanmukhananda Fine Arts & Sangeetha Sabha Auditoriumನಲ್ಲಿ, ಶ್ರೀಮತಿ ವೈಜಯಂತಿಮಾಲ ಬಾಲಿರವರ ಭರತ ನಾಟ್ಯದ ನೃತ್ಯ ನಡೆದಿತ್ತು. 2,500ಕ್ಕೂ ಹೆಚ್ಚು ಜನ ಬಂದು ಸಂಗೀತ ಹಾಗೂ ನೃತ್ಯವನ್ನು ಕೇಳಿ ಮತ್ತು ನೋಡಿ ಆನಂದಿಸಿದ ದಿನ. ಈ ಸಮಾರಂಭದಿಂದ Mysore Associationಗೆ ಸುಮಾರು ರೂ. 70,000/- ರಷ್ಟು ಹಣದ ಲಾಭ ಬಂದಿತ್ತು. ಅದರಲ್ಲಿ ಜಯ್ಯಕ್ಕ ಪಾತ್ರವೇನಿತ್ತು ಅಂದರೆ - ಅವರೇ ನನ್ನನ್ನು ಶ್ರೀಮತಿ ವೈಜಯಂತಿಮಾಲ ಬಾಲಿರವರ ಮನೆಗೆ ಕರೆದು ಕೊಂಡು ಹೋಗಿ ಅವರಿಂದ Mysore Associationನಲ್ಲಿ Programmes ಕೊಡಲು ಒಪ್ಪಿಸಿದ್ದುದು.

ಅಂದ ಹಾಗೆ ಅವತ್ತು ಶ್ರೀಮತಿ ವೈಜಯಂತಿಮಾಲ ಬಾಲಿರವರು ತಾವೇ ಪುರಂದರ ದಾಸರ ಕೃತಿಯನ್ನು ಹೇಳಿ - ಹಾಗೂ ನೃತ್ಯ ನಡೆಸಿದ್ದರು. ಪ್ರೇಕ್ಷಕರಲ್ಲಿ ಕೆಲವು ಜನ Programme ಆದ ಮೇಲೆ ಹೊರಗಡೆ ಬಂದು ಕಣ್ಣುವರೆಸಿ ಕೊಳ್ಳುತ್ತಿದ್ದ (ಸಂತಸದ ಕಣ್ಣೀರು) ದೃಶ್ಯ ಹಾಗೂ ಆ ಸಮಯದಲ್ಲಿ ಜಯ್ಯಕ್ಕನವರಿಗೆ ನಾವು ವಂದಿಸಿದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ.

ಆ ಜಯ್ಯಕ್ಕ ಇನ್ನಿಲ್ಲ.

**— ಜಿ. ವಿ. ರಾವ್**
(ಅಂದು ಅಸೋಸಿಯೇಷನ್ನಿನ ಉಪಾಧ್ಯಕ್ಷರು)

ಸನ್ಮಾನ್ಯರೇ,

ಮಹಿಳಾ ಬರಹಗಾರ್ತಿಯರಿಗಾಗಿ ಕರ್ನಾಟಕ ಸರಕಾರ ಈ ಸಾಲಿನಿಂದ ಒಂದು ಲಕ್ಷ ರೂಪಾಯಿ ಮೊತ್ತದ `ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ'ಯನ್ನು ಸ್ಥಾಪಿಸಿದೆ. ಆ ಪ್ರಶಸ್ತಿಯನ್ನು ಪ್ರಪ್ರಥಮವಾಗಿ ನಾನು ಪಡೆದು ಕೊಂಡಿದ್ದೇನೆ. ತಾ. 28-06-1996ರಂದು ಪ್ರಶಸ್ತಿ ಪ್ರದಾನ ಸಮಾರಂಭವಾಯಿತು.

ಮುಂಬಯಿ ಕನ್ನಡಿಗರೊಂದಿಗೆ ಈ ಸಂತೋಷ ಗೌರವಗಳನ್ನು ಹಂಚಿಕೊಳ್ಳಲು `ಅಧ್ಯಕ್ಷರು ಮತ್ತು ಸದಸ್ಯ'ರನ್ನುದ್ದೇಶಿಸಿ ಆಹ್ವಾನ ಪತ್ರಿಕೆ ಕಳಿಸಿದ್ದೆ. ಒಂದು ಸಾಲು ಅಭಿನಂದನಾ ಪತ್ರ ನಿರೀಕ್ಷಿಸಿದ್ದೆ. ಬಹುಶಃ ನನ್ನ ಪತ್ರ ಗಮನಕ್ಕೆ ಬರಲಿಲ್ಲವೆಂದು ತೋರುತ್ತದೆ.

1992ರಿಂದ `ನೇಸರು' ಕಳಿಸುತ್ತಿದ್ದೀರಿ; ಧನ್ಯವಾದಗಳು. ಪತ್ರಿಕೆ ಮುಂಬಯಿ ಸುದ್ದಿಗೆ ಮೀಸಲಾದ್ದರಿಂದ, ನನಗೆ ಆಸಕ್ತಿ ಮೂಡುವುದಿಲ್ಲ. (ಈ ಬಗ್ಗೆ ಹಿಂದೊಮ್ಮೆ ಬರೆದಿದ್ದೆ). ದಯವಿಟ್ಟು ಇನ್ನು ಮುಂದೆ `ನೇಸರು' ಕಳಿಸಬೇಡಿರಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**— ಟಿ. ಸುನಂದಮ್ಮ, ಬೆಂಗಳೂರು**

*'ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿಯ ವಿಜೇತರಾದ ಶ್ರೀಮತಿ ಸುನಂದಮ್ಮನವರಿಗೆ 'ನೇಸರು' ವಿನ ಅಭಿನಂದನೆಗಳು*

***

Dear Rekha,

I was surprised to get Nesaru by post today. I saw my article on Computer Virus. The article had appeared earlier in 'Bala Vigyana'. There should have been a line like 'Bala Vigyana Kripe'. How is it that it has been missed out? Could you please mail me the other article on the Gyan Peeth Award series?

16 July 1996 — Regards
Taipei, Taiwan — **Pavanaja**

***

*Thank you for drawing our attention. We regret the omission.*

*- Ed.*

***

ಮಾನ್ಯ ಸಂಪಾದಕರೇ,

ವಂದನೆಗಳು. `ನೇಸರು'ವ ಪ್ರತಿಯೊಂದನ್ನು (ಮೇ 1996ರ ಸಂಚಿಕೆ) ಮಿತ್ರರಾದ ಶ್ರೀ ಸನದಿಯವರ ಟಪ್ಪಾಲಿನಲ್ಲಿ ನೋಡಿದೆ. 'ಜ್ಞಾನಪೀಠ ಪ್ರಶಸ್ತಿ ವಿಜೇತರು' (ಭಾಗ 3) ಎಂಬ (ಪ್ರೊ. ಶ್ರೀಮತಿ ಸುನೀತಾ ಶೆಟ್ಟಿಯವರ) ಲೇಖನವನ್ನು ಓದಿದೆ. ಸಾರಸಂಗ್ರಹವಾಗಿ ಕಾರಂತರ ಬದುಕು-ವ್ಯಕ್ತಿತ್ವ-ಬರಹ ಮೂರೇ ಪುಟದ ಲೇಖನದಲ್ಲಿ ಚೆನ್ನಾಗಿ ಮೂಡಿ ಬಂದಿವೆ.

ಪತ್ರಿಕೆಯಲ್ಲಿನ ಇನ್ನೊಂದು ಆಸಕ್ತಿಯುಂಟು ಮಾಡುವ Feature ಎಂದರೆ 'ಪುಸ್ತಕ ವಿಮರ್ಶೆ' ಅದನ್ನಿನ್ನೂ ಓದಿಲ್ಲ, ಓದಬೇಕು.

ಶ್ರೀ ಕೆ. ರಘುನಾಥರ 'ಸಂದರ್ಶನ'ವನ್ನೂ ಓದಿದ್ದೇನೆ.

ಅದರಂತೆ, ಆರೋಗ್ಯ ಹಾಗೂ ವಿಜ್ಞಾನ ಅಂಕಣಗಳಲ್ಲಿನ ಲೇಖನಗಳೂ ಉಪಯುಕ್ತವಾಗಿವೆ.


ನನಗೆ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರೆಲ್ಲರ ಬಗೆಗಿನ ಲೇಖನಗಳು ಬೇಕಾಗಿವೆ. ದಯವಿಟ್ಟು ಸಂಬಂಧಪಟ್ಟ ಸಂಚಿಕೆಗಳನ್ನು ಕಳಿಸುವಿರಾ?

ಚಂದಾ ದರವನ್ನು ಎಲ್ಲೂ ತಿಳಿಸಿಲ್ಲ. ದಯವಿಟ್ಟು ತಿಳಿಸಿದರೆ, ಚಂದಾದಾರನಾಗ ಬಯಸುವೆ.

ಇಂತು,

ನಿಮ್ಮ ವಿಶ್ವಾಸದ,
**ಜಿ. ಬಿ. ಸಜ್ಜನ**

### ಅಭಿನಂದನೆ



ಅಸೋಸಿಯೇಷನ್ನಿನ ಸದಸ್ಯರಾದ ಶ್ರೀ ಆರ್. ವಿ. ರಾಮ ರಾವ್ ಮತ್ತು ಶ್ರೀಮತಿ ಲಕ್ಷ್ಮಿ ರಾವ್ ಅವರ ಮಗ ಚಿ|| ಮನೋಜ್ ರಾಮ ರಾವ್ ಮಾರ್ಚ್ 1996ರ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಶೇಕಡ 91.20 ಅಂಕಗಳನ್ನು ಗಳಿಸಿ ತೇರ್ಗಡೆಯಾಗಿದ್ದಾನೆ. I.I.T. ಅಥವಾ U.D.C.T.ಯಲ್ಲಿ Computer ವಿಜ್ಞಾನ ಓದುವ ಅಭಿಲಾಷೆಯನ್ನು ಹೊಂದಿರುವ ಮನೋಜ್‌ಗೆ 'ನೇಸರು'ವಿನ ಶುಭ ಹಾರೈಕೆಗಳು.

ಕಥೆ

# '...ರಿ ಪ್ರಸನ್ನ'

[ಶ್ರೀಮತಿ ಉಮಾ ರಾವ್ ಅವರು ತಮ್ಮ ಕಥಾ ಸಂಕಲನ 'ಕಡಲ ಹಾದಿ' ಯಿಂದ ಆಯ್ದ ಕತೆ.]

ಶಿವ ನನ್ನನ್ನು ಒತ್ತಾಯ ಮಾಡಿರದಿದ್ದರೆ, ಆ ಮನೆಗೆ ನಾನು ದಾರಿ ತಪ್ಪಿಯೂ ಹೋಗುತ್ತಿರಲಿಲ್ಲ. ಹಾಗೆನಿಸಿದ್ದು ಆ ಮನೆ ತಲುಪಿ, ತುಕ್ಕು ಹಿಡಿದು ಹಿಂಜು ಸಡಿಲವಾಗಿ ನೆಲಕ್ಕೆ ವಾಲಿ ಮಣ್ಣಿನಲ್ಲಿ ಹೂತುಕೊಂಡು ನಾನೆಷ್ಟು ತಳ್ಳಿದರೂ ತೆಗೆದುಕೊಳ್ಳದೆ ನನ್ನ ಶಕ್ತಿಗೆ ಸವಾಲು ಹಾಕುತ್ತಿದ್ದ ಗೇಟನ್ನು ನೂಕಿದಾಗಲೇ. ಕೊನೆಗೆ ಕಿರ್ರೆನ್ನುತ್ತಾ ನಿಧಾನವಾಗಿ ಮಣ್ಣಿನಲ್ಲಿ ಗುರುತು ಮಾಡಿಕೊಂಡು ನನಗೆ ಕೊಂಚವೇ ದಾರಿ ಮಾಡಿಕೊಟ್ಟಿತು. ನಾನು ಅದರೊಳಗೆ ನುಸುಳಿ ಮತ್ತೊಮ್ಮೆ ತಲೆಯೆತ್ತಿ ಮನೆಯ ಮೇಲೆ ಕಣ್ಣಾಡಿಸಿದೆ. ಒಂದಾನೊಂದು ಕಾಲದಲ್ಲಿ ಹಸಿರು ಬಣ್ಣದಲ್ಲಿದ್ದಿರಬಹುದಾದ ಅಕ್ಷರಗಳು. ಹೌದು, ಶಿವ ಹೇಳಿದ್ದನಲ್ಲಾ ಆ ಮನೆ ಹೆಸರು "ಶ್ರೀಹರಿ ಪ್ರಸನ್ನ" ಎಂದು. 'ಶ್ರೀ' 'ಹ' ಎರಡಕ್ಷರಗಳೂ ಗಾರೆ ಸಮೇತ ಕಳಚಿಕೊಂಡು ನೆಲಕ್ಕುದುರಿ ಧೂಳಾಗಿ ಹಾರಿಹೋಗಿತ್ತು. ಈಗುಳಿದಿದ್ದು "...ರಿ ಪ್ರಸನ್ನ" ಮಾತ್ರ. ಅದೂ ಯಾವ ನಿಮಿಷಕ್ಕಾದರೂ ಉದುರಿ ಮನೆಯನ್ನು ಹೆಸರಿಲ್ಲದಂತಾಗಿಸುವ ಬೆದರಿಕೆ ಹಾಕುತ್ತಲೇ ನಿಂತಿತ್ತು. ಒಂದು ಸಣ್ಣ ಕಾಂಕ್ರೀಟಿನ ಹಾದಿ ಮೆಟ್ಟಿಲುಗಳವರೆಗೂ ಹಾದುಹೋಗಿತ್ತು. ಅದೂ ಅಷ್ಟೆ, ಕಿತ್ತು ಹೋಗಿ ಸಿಡುಬಿನ ಕಲೆಗಳಂತೆ ತೂತು ತೂತಾಗಿದ್ದ ದಾರಿ. ಮೆಟ್ಟಿಲುಗಳ ಪಕ್ಕ ಸ್ವಲ್ಪ ಸುಣ್ಣ ಹೋಗಿ ತುದಿಯ ಗಾರೆಯುದುರಿದ ಕಟ್ಟೆಗಳು. ಅದರ ಮೇಲೆ ಒಂದೊಂದು ಬಣ್ಣಗೆಟ್ಟ ಹೂವಿನ ಕುಂಡ. ಅದರ ತುಂಬಾ ಕಾಡುಕಾಡಾಗಿ ಬೆಳೆದಿದ್ದ ಹುಲ್ಲಿನ ಮಧ್ಯೆ, ನನ್ನನ್ನು ಹೇಗೆ ಕೊಲ್ಲುತ್ತೀರೋ ನೋಡುತ್ತೇನೆ ಎಂದು ಸವಾಲು ಹಾಕುತ್ತಾ ಸೆಟೆದುನಿಂತ ವಿಚಿತ್ರ ಫರ್ನ್. ಮುಂದೆಯೇ, ಪೊರಕೆ ಕಂಡು ಎಷ್ಟೋ ವರ್ಷಗಳಾಗಿದ್ದ ಕಡಪಾ ಕಲ್ಲಿನ ವರಾಂಡಾ. ಕಲ್ಲುಗಳನ್ನು ಸೇರಿಸಿದ್ದ ಜಾಗಗಳಲ್ಲಿ, ಪುಟ್ಟ ಪುಟ್ಟ ಹಳ್ಳಗಳಾಗಿ ಅವುಗಳಿಂದ ಇರುವೆ, ಗೊದ್ದಗಳು ಹೊರಬರುತ್ತಿದ್ದವು. ಅನುಮಾನಿಸುತ್ತಾ, ಕರೆಗಂಟೆಗಾಗಿ ಕಣ್ಣು ಹಾಯಿಸುತ್ತಾ ನನ್ನ ಕೈಯಲ್ಲಿದ್ದ ಪ್ಯಾಕೆಟ್ ಮತ್ತೊಮ್ಮೆ ಮುಟ್ಟಿ ನೋಡಿಕೊಂಡೆ. ನಾನಿಲ್ಲಿಗೆ ಬಂದಿದ್ದರ ಕಾರಣ ಅದೇ ಆಗಿದ್ದರಿಂದ. ಆ ಪ್ಯಾಕೆಟ್ಟಿನಲ್ಲಿ ಏನಿರಬಹುದು? ಇದುವರೆಗೂ ನನಗೆ ಅಷ್ಟು ಕುತೂಹಲವೆನಿಸಿರಲಿಲ್ಲ. ಶಿವ ನನ್ನ ಕೈಗೆ ಕೊಟ್ಟಾಗ "ಮುಂದಿನ ತಿಂಗಳು ರಜಾದಲ್ಲಿ ಮನೆಗೆ ಹೋಗೇ ಹೋಗ್ತೀಯಲ್ಲೋ, ಈಗೇನು ಇಷ್ಟು ಅರ್ಜೆಂಟು . . ." ಎಂದು ಅಸಮಾಧಾನ ವ್ಯಕ್ತಪಡಿಸಿದ್ದೆ. "ಇಲ್ಲ... ಹೌದು ... ಇದು ಅರ್ಜೆಂಟೇ... ಅದೂ ನಾನು ಹೋಗ್ತೀನೋ ಇಲ್ವೋ ಯಾವುದೂ ಗೊತ್ತಿಲ್ಲ..." ಎಂದು ತಡವರಿಸಿದ್ದ. ಕಾಲೇಜಿಗೆ ರಜಾ ಬಂದ ತಕ್ಷಣ ಊರಿಗೆ ಹೋಗಲು ಒಂಟಿಕಾಲ ಮೇಲೆ ನಿಂತಿರುತ್ತಿದ್ದ ನನಗೆ ಇವನು 'ಅನುಮಾನಿಸುತ್ತಿದ್ದದ್ದನ್ನು ಕಂಡು ಆಶ್ಚರ್ಯವಾಗಿತ್ತು.

ಮನೆಯ ಬಾಗಿಲು ಈಗಿನ ಕಾಲದ ಬಾಗಿಲುಗಳಿಗಿಂತ ಎತ್ತರವಾಗಿತ್ತು. ಅದಕ್ಕೆ ಹಚ್ಚಿದ ಕಂದು ಬಣ್ಣದ ಪೈಂಟ್ ಸುಲಿದು ಯಾರಾದರೂ ತುಂಟ ಮಕ್ಕಳು ಕೆರೆದು ಉದುರಿಸುವುದಕ್ಕಾಗಿ ಕಾದಿತ್ತು. ಹಿಂದೆಂದೋ ಇದ್ದಿರಬಹುದಾದ ಹೆಸರಿನ ಫಲಕ ಕಿತ್ತು ಈಗ ಅದರ ಗುರುತು ಮಾತ್ರವಿತ್ತು. ಹಿತ್ತಾಳೆಯ ಗಟ್ಟಿಗಡುತರವಾದ ಚಿಲುಕ ಕಪ್ಪು ಬಣ್ಣ ತಿರುಗಿತ್ತು. ಬಾಗಿಲಿನ ಎರಡು ಪಕ್ಕದಲ್ಲೂ ಉದ್ದುದ್ದ ಸರಳು ತುಂಬಿದ ಕಿಟಕಿಗಳು ಮುಚ್ಚಿಕೊಂಡೇ ಇದ್ದವು. ಈ ಮನೆಯ ಒಳಗೆ ಯಾರಾದರೂ ಇರುವರೆಂಬ ಗ್ಯಾರಂಟಿ ಏನು? ಬೀಗ ಹಾಕಿಲ್ಲ ಎನ್ನುವುದೊಂದೇ ಏನು? ಕರೆಗಂಟೆ ಕಂಡು ಬರದಿದ್ದರಿಂದ ಮೆಲ್ಲಗೆ ಚಿಲುಕ ಶಬ್ದ ಮಾಡಿ ಕಾದೆ. ಸ್ವಲ್ಪ ಹೊತ್ತು ತಡೆದು ಹಿಂತಿರುಗಿ ನೋಡಿದೆ. ನಾನು ಒಳಬರುತ್ತಾ ಸೀದಾ ನಡೆದು ಬಂದದ್ದರಿಂದ ಗಮನ ಕೊಡದ ವಿಷಯಗಳು ಕಂಡು ಬಂದವು. ಒಂದೆರಡು ಹೆಜ್ಜೆ ಮುಂದೆ ನಡೆದೆ. ಮನೆಯ ಸುತ್ತ ಅಷ್ಟು ಜಾಗದಲ್ಲೂ ಹುಲ್ಲು ಹುಚ್ಚುಚ್ಚಾಗಿ ಬೆಳೆದಿತ್ತು. ಮಧ್ಯೆ ಮಧ್ಯೆ ವಿಚಿತ್ರ ಹಳದಿ ಹೂವಿನ ಮುಳ್ಳಿನ ಗಿಡಗಳು, ಬೇಲಿ ಗಿಡಗಳು, ಒಂದು ಪರಂಗಿ ಮರ ... ನೆಲದ ಮೇಲೆ ಅಲ್ಲಲ್ಲಿ ಹರಡಿದ ಮುಟ್ಟಿದರೆ ಮುನಿ ಪೊದೆಯಾಗಿದ್ದರಿಂದ ಅದರ ಮಧ್ಯೆ ಯಾರೂ ಓಡಾಡುವ ಹಾಗೇ ಇರಲಿಲ್ಲ. ಸ್ವಲ್ಪ ದೂರದಲ್ಲೇ ಒಂದು ನಾಯಿ ಮನೆ... ಬೆಚ್ಚಿದೆ. ನೋಡೇ ಇರಲಿಲ್ಲವಲ್ಲ... ನಾಯಿ ಏನಾದರೂ ಇದ್ದರೆ... ಅದರ ಮನೆಯೆದುರಿಗೇ ಮಣ್ಣಿನಲ್ಲಿ ಹೂತಿಟ್ಟ ಎನಾಮಲ್ ತಟ್ಟೆಯೊಳಗೆ ಕಸಕಡ್ಡಿ ಮಣ್ಣು ಸೇರಿ ಕರೆಕಟ್ಟಿ ಹೋಗಿತ್ತು. ಮನೆಯೊಳಗೆ ಹಬ್ಬಿಕೊಂಡಿದ್ದ ಯಾವುದೋ ಬಳ್ಳಿಗಳು... ಮತ್ತೆ ಬಾಗಿಲತ್ತ ನಡೆದೆ. ತಲೆ ಎತ್ತಿ ನೋಡಿದೆ. ಮಾವಿನ ಎಲೆಗಳುದುರಿ ಹಾಗೇ ಉಳಿದಿತ್ತು ತೋರಣದ ದಾರ. ಯಾರಿದ್ದಾರೋ ಇಲ್ಲವೋ. ಒಂದು ಸಲ ಪ್ರಯತ್ನ ಮಾಡೋದು, ಇಲ್ಲದಿದ್ದರೆ ವಾಪಸ್ಸು ತೆಗೆದುಕೊಂಡು ಹೋಗಬೇಕಲ್ಲಾ... ಎಷ್ಟು ಭಾರ ಬೇರೆ... ಸುಮಾರು 2 ಕಿಲೋ ಆದರೂ ಇರಬೇಕು ... ದಭದಭದಭ ಬಾಗಿಲು ಬಡಿದೆ, ಸ್ವಲ್ಪ ನಿಲ್ಲಿಸಿ ಮತ್ತೆ ಚಿಲುಕ ಶಬ್ದ ಮಾಡುತ್ತಾ ಜೊತೆಗೇ ಬಾಗಿಲೂ ತಟ್ಟಿದೆ. "ಬಂದೇ ...!" ಒಂದು ಹೆಂಗಸಿನ ದನಿ. ನಾನು ಕೇಳಿದ್ದು ನಿಜವೋ, ಭ್ರಮೆಯೋ ಎನ್ನುವಷ್ಟು ದೂರದಿಂದ.

ಸ್ವಲ್ಪ ಹೊತ್ತಾದ ನಂತರ ಯಾರೋ ಚಿಲುಕದ ಜೊತೆ ಒದ್ದಾಡುತ್ತಿರುವ ಕಿರಕಿರ ಶಬ್ದ. ಥಟಾರನೆ ಅದು ಕೊನೆಗೆ ತೆಗೆದುಕೊಂಡಾಗ ಕಚ್ಚಿಕೊಂಡಿದ್ದ ಬಾಗಿಲಿನೊಂದಿಗೆ ಹೋರಾಟ. ಅವರಿಗೆ ಸಹಾಯ ಮಾಡಲೆಂದು ಇತ್ತಲಿಂದಲೂ ಮೆಲ್ಲಗೆ ತಳ್ಳಿದೆ. ಕೊನೆಗೆ ಅದು ಕಿರ್ರೆನ್ನುತ್ತಾ ತೆಗೆದುಕೊಂಡಿತು. ಬೆಚ್ಚಿ ಬಿದ್ದೆ. ಎದುರುಗಡೆ ಸುಮಾರು 60-65 ವರ್ಷದ ಹೆಂಗಸು. ವೃದ್ಧಾಪ್ಯ ಎಷ್ಟೇ ದಾಳಿ ಮಾಡಿದರೂ ಇದಕ್ಕಿಂತ ಹೆಚ್ಚು ಘಾಸಿಗೊಳಿಸಲಾರದೆಂಬಂಥ ಮುಖ. ಅಗಲವಾದ ಭಯ ತುಂಬಿದ ಕಣ್ಣುಗಳು. ಕಣ್ಣುಗಳ ಕೆಳಗೆ ಸುಕ್ಕು ಗಟ್ಟಿದ ಕಪ್ಪು ಚರ್ಮ. ಕೈಯಲ್ಲೊಂದೊಂದು ಕಪ್ಪು ಗಾಜಿನ ಬಳೆ. ಕತ್ತಿನಲ್ಲಿ ಕಪ್ಪು ದಾರ. ಮಣಕುಗಟ್ಟಿದ ಬೂದುಬಣ್ಣದ ಸೀರೆ, ಹಳದಿ ತಿರುಗಿದ ಬಿಳಿಯ ರವಿಕೆ.

'ಯಾರು?' ಒಳಗಡೆ ಬನ್ನಿ ಎನ್ನದೆ ಆಕೆ ಕೇಳಿದರು. "ನಾನಮ್ಮ... ನಾನು ಶಿವಶಂಕರನ ಸ್ನೇಹಿತ..." ಇದ್ದಕ್ಕಿದ್ದಂತೆ ಜೀವ ತಳೆದ ಪರಿಸ್ಥಿತಿ ಕಂಡು ಖುಷಿಯಾಗಿ ನಗುತ್ತಾ ಹೇಳಿದೆ. ಅದೇಕೋ ಆಕೆಯ ತುಟಿಗಳ ಮೇಲೆ ನಗು ಮೂಡಲಿಲ್ಲ. ಬಾಗಿಲಿಗೆ ಅಡ್ಡ

FOR ALL YOUR DOMESTIC
AND INTERNATIONAL
TRAVEL ARRANGEMENTS
CONTACT
AUGUST
TRAVEL
SERVICE
Agents For
INDIAN AIR LINES,
EAST WEST,
MODI LUFT &
JET AIRLINES
REGD. OFFICE:
315 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
ALSO AT:
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

ಹಾಕುವಂತೆ ಎರಡೂ ಕೈಗಳನ್ನೂ ಚೌಕಟ್ಟಿನ ಮೇಲಿಟ್ಟು ನನ್ನನ್ನು ಹಾಗೇ ನೋಡುತ್ತಾ ಹೋದರು. "ಶಿವ ನಿಮಗಾಗಿ ಏನೋ ಕಳಿಸಿದಾನೆ . . . ಈ ಪ್ಯಾಕೆಟ್ ..."

'ಶಿವ' ಒಂದು ಕ್ಷಣ ಆಕೆಯ ಹುಬ್ಬುಗಳು ಆಶ್ಚರ್ಯದಿಂದ ಗಂಟಾದವು. ನಿಧಾನವಾಗಿ ನನ್ನ ಕೈಯಲ್ಲಿದ್ದ ಪ್ಯಾಕೆಟ್ಟಿನತ್ತ ನೋಡಿದರು, "ಇದೇ..." ನಾನದನ್ನು ಮುಂದೆ ಹಿಡಿದೆ. ಆಕೆ ಬಾ ಎನ್ನದೆ ನಿಧಾನವಾಗಿ ಒಳಗೆ ನಡೆದರು. ಅದನ್ನೇ ಆಹ್ವಾನವೆಂದುಕೊಳ್ಳುತ್ತಾ ನಾನೂ ಆಕೆಯ ಹಿಂದೆಯೇ ನಡೆದೆ. ಒಳಗೆ ಕತ್ತಲು ಕತ್ತಲು. ಕುಳಿತುಕೊಳ್ಳಲೆಂದು ಸುತ್ತಮುತ್ತ ಕಣ್ಣು ಹಾಯಿಸಿದೆ. ಕಣ್ಣಿಗೆ ಕತ್ತಲೂ ಒಗ್ಗುವವರೆಗೂ ಕಾದೆ. ಒಂದು ಮೂಲೆಯಲ್ಲಿ ದೊಡ್ಡ ಕರಿಮರದ ಈಸಿ ಛೇರ್ ಒಂದು ಕಂಡು ಬಂದಿತು. ಇನ್ನೊಂದು ಮೂಲೆಯಲ್ಲಿ ಸುತ್ತಿಟ್ಟ ಜೂಲುಜೂಲಾದ ಚಾಪೆ. ತಲೆ ಎತ್ತಿದೆ. ಹೆಂಚಿನ ಮನೆಯಾದ್ದರಿಂದ ಮೇಲೆಲ್ಲಾ ಜೇಡಗಳ ಕುಸುರಿ ಕೆಲಸ. ಗೋಡೆಗಳ ತುಂಬಾ ಹಳದಿ ಕಂದು ಕಲೆಗಳು, ಉದುರುತ್ತಿರುವ ಪ್ಲ್ಯಾಸ್ಟರ್. ಒಂದೇ ಒಂದು ಲೈಟು. ಗೋಡೆಯ ಮೇಲೊಂದು ಸ್ಯಾಟಿನ್ನಿನ ಗುಲಾಬಿಗಳ ಮಧ್ಯೆ ನಗುತ್ತಿದ್ದ ಗಂಡಹೆಂಡಿರ ಚಿತ್ರ. ಸುಮಾರು 50 ವರ್ಷಗಳ ಹಿಂದೆ ಜನಪ್ರಿಯವಾಗಿದ್ದ ವೈಖರಿಯಲ್ಲಿ, ಹೆಂಡತಿ ಸಿಲ್ಕಿನ ಸೀರೆ ಉಟ್ಟು, ಪಫ್ ತೋಳಿನ ರವಿಕೆ ತೊಟ್ಟು, ಮೈತುಂಬಾ ಒಡವೆ ಹಾಕಿ, ಕರಿಮರದ ಕುರ್ಚಿಯ ಮೇಲೆ ಮುದುಡಿ ಕುಳಿತಿದ್ದಳು. ಸೂಟು, ಪೇಟದ ದರ್ಪದ ಗಂಡ ಒಂದು ಕೈಯನ್ನು ಕುರ್ಚಿಯ ಮೇಲಿಟ್ಟು ಅವಳ ಹಿಂದೆ ನಿಂತಿದ್ದ. ಈ ಹೆಂಗಸೇ ಇರಬಹುದೇ! ಫೋಟೋ ಪಕ್ಕದಲ್ಲೇ ಇದ್ದ ರೋಮನ್ ಅಂಕಗಳ ಅಜ್ಜನ ಗಡಿಯಾರ ಶಬ್ದ ಮಾಡುತ್ತಾ ನಡೆಯುತ್ತಿತ್ತು. ಅರೆ ... ಹಾಲಿನ ಅತ್ತಕಡೆ ಇದುವರೆಗೂ ನನ್ನ ಕಣ್ಣಿಗೇ ಬಿದ್ದಿರದಿದ್ದ ಕರಿಮರದ ಉಯ್ಯಾಲೆ ತೂಗುವುದೇ ಮರೆತು ಹೋಗಿದೆಯೋ ಎಂಬಂತೆ ಸ್ತಬ್ಧವಾಗಿತ್ತು. ಆಕೆ ಮತ್ತೆ ಒಳಗಿಂದ ಬಂದರು. ಈಸಿ ಛೇರಿನತ್ತ ಕೈ ತೋರಿಸಿ ಪಕ್ಕದ ರೂಮಿಗೆ ನಡೆದರು. ಅದರ ತುಂಬಾ ಕುಳಿತಿದ್ದ ಧೂಳನ್ನು ಕಂಡು ಮುಜುಗರವಾದರೂ, ಒರೆಸಿದರೆ ಇಲ್ಲ ಊದಿದರೆ ಇವರಿಗೆ ಬೇಸರವಾಗಬಹುದೆಂದು ಕೊಂಡು, ಅಂದು ನಾನೇ ಒಗೆದು ಇಸ್ತ್ರಿ ಮಾಡಿಸಿದ್ದ ಪ್ಯಾಂಟಿನೊಡನೆ ಹಾಗೇ ಕೂತೆ. ಶಿವ ಇಲ್ಲಿರುತ್ತಿದ್ದರೆ ಅವನ ರೂಮು ಯಾವುದಿರಬಹುದು? ಆಗ ಇದುವರೆಗೂ ಇವಟವದೆ ಆಗತಾನೇ ನನ್ನ ಪಕ್ಕದಲ್ಲೇ ಮೂರ್ತಿವೆತ್ತಂತಿದ್ದ ಮರದ ಮಹಡಿ ಮೆಟ್ಟಿಲುಗಳು ಕಂಡು ಬಂದುವು. ಅದರುದ್ದಕ್ಕೂ ತಲೆ ಎತ್ತಿ ನೋಡಿದೆ. ಅದರ ಕೊನೆಗಿದ್ದ ಬಾಗಿಲು ಮುಚ್ಚಿತ್ತು. ಹಾಗಾದರೆ ಇದು ಹೋಗುವುದೆಲ್ಲಿಗೆ? ಟೆರೇಸಿಗೆ? ಅಥವಾ ಅಲ್ಲೇನಾದರೂ ಇನ್ನೊಂದು ರೂಮಿದೆಯೇ? ಶಿವ ಇರುತ್ತಿದ್ದ ರೂಮು. ಹಾಗೇ ಇತ್ತ ಕಣ್ಣು ಹಾಕಿದಾಗ ಹಿಂದಿನ ಬಾಗಿಲಿನಾಚೆ ಹಜಾರ ಕಂಡುಬಂದಿತು. ಎದ್ದು ನಿಂತು ಇಣುಕಿದೆ. ಗಾಳಿ ಬೆಳಕಿಗೆ ತೆರೆದುಕೊಂಡಿದ್ದ ಅಂಗಳ. ನೆಲಕ್ಕೆ ಚಪ್ಪಡಿ ಕಲ್ಲು. ಮಧ್ಯೆ ಬಿಳಿಯ ಸಿಮೆಂಟಿನಿಂದ ಮಾಡಿದ, ಎರಡು ಬೆತ್ತಲೆ ಮಕ್ಕಳು ಹೊತ್ತು ನಿಂತಿದ್ದ ಕಾರಂಜಿ. ಕಾರಂಜಿಯಲ್ಲಿ ನೀರಿರಲಿಲ್ಲ. ಮಣ್ಣು ತುಂಬಿ ಗರಿಕೆ ಹುಲ್ಲುಪಚ್ಚೆ ಬೆಳೆದಿತ್ತು. ಎರಡು ಗುಬ್ಬಚ್ಚಿಗಳು ಕೂತು ಏನನ್ನೋ ಹೆಕ್ಕುತ್ತಿದ್ದುವು. ಅದರಾಚೆ ಮಸಿಗಟ್ಟಿದ ಅಡಿಗೆಮನೆ. ಬಚ್ಚಲುಮನೆ. ಚಿಮಣಿಯಲ್ಲಿ ಹೊಗೆಯಿರಲಿಲ್ಲ. ಮತ್ತೆ ಆಕೆಯ ಆಕೃತಿ ಬಾಗಿಲಿನಲ್ಲಿ ಕಂಡಂತಾಗಿ, ಏನೋ ತಪ್ಪು ಮಾಡಿದವನಂತೆ ಬಂದು ವಿಧೇಯನಾಗಿ ಆರಾಮ ಕುರ್ಚಿಯ ಮೇಲೆ ಕುಳಿತೆ. ಆದರೆ ಎಲ್ಲೆಲ್ಲೂ ಸದ್ದಿಲ್ಲ. ಆಕೆ ಎಲ್ಲಿಹೋದಳು . . . ಈಗ ನಾನೇನು ಮಾಡಲಿ... ಇಲ್ಲೇ ಹೀಗೇ ಈ ಈಸಿ ಛೇರಿನ ಮೇಲೆ ಕೂತು ಎಷ್ಟು ಕಾಯುವುದು? ಅಥವಾ ಅವರಿಗೆ ಹೇಳದೆ ಹೋಗುವುದಾದರೂ ಹೇಗೆ? ನನಗೋಸ್ಕರ ಏನಾದರೂ ಕಾಫಿ-ಗೀಫಿ ಮಾಡುತ್ತಿರಬಹುದು... ಹಾಗೇ ಕಾಯುತ್ತಲೇ ಹೋದೆ. ಆಗ ಕಿಟಕಿಯ ಕೆಳಗಿದ್ದ ಹಳೆಯ ವೀಣೆಪೆಟ್ಟಿಗೆ ಕಣ್ಣಿಗೆ ಬಿತ್ತು. ಅದಕ್ಕೊಂದು ಪುಟ್ಟ ಬೀಗ. ಅದರ ಮೇಲೆ ಒಂದು ಪೊರಕೆ, ಒಂದು ಜೊತೆ ಸವೆದ ಹವಾಯಿ ಚಪ್ಪಲಿಗಳು, ಕೆಲವು ಹಾರ್ಲಿಕ್ಸ್ ಬಾಟಲಿನ ಮುಚ್ಚಳಗಳು, ಒಂದು ಖಾಲಿ ಗ್ಲೈಕೋಡಿನ್ ಶೀಷೆ. ಇದರಲ್ಲಿ ವೀಣೆಯಿರಬಹುದೇ? ಇದನ್ನು ಯಾರು ನುಡಿಸುತ್ತಿದ್ದಿರಬಹುದು?

ಮತ್ತೆ ಆಕೆ ನನ್ನ ಅಪ್ಪಣೆಗೆ ಕಾಯುತ್ತಿದ್ದಂತೆ ಎದುರಿಗೆ ಬಂದು ನಿಂತಳು. "ತಗೊಳ್ಳಿ... ಶಿವ ಇದನ್ನು ನಿಮಗೋಸ್ಕರ ಕಳಿಸಿದ್ದಾನೆ..." ನಾನು ಮುಂದೆ ಹಿಡಿದ ಪ್ಯಾಕೆಟ್ಟಿನತ್ತ ಅಲಕ್ಷ್ಯದಿಂದ ನೋಡಿದರು.

"ಶಿವ, ನಾನು ಒಂದೇ ರೂಮಿನಲ್ಲಿದ್ದೀವಿ... ಅವನು ನಿಮ್ಮನ್ನೆಲ್ಲಾ ತುಂಬಾ ಜ್ಞಾಪಿಸಿಕೊಳ್ತಾನೆ... ನಿಮ್ಮ... ನಿಮ್ಮ..." ಎಂದೆಲ್ಲಾ ತೊದಲಿದೆ. ಆ ದೊಡ್ಡ ಹಾಲಿನಲ್ಲಿ ನಾನೊಬ್ಬನೇ ನಿಂತು ಮಾತಾಡಿಕೊಳ್ಳುತ್ತಿದ್ದೇನೆ ಎನ್ನಿಸಿತು. ಆಕೆ ಹಾಗೇ ಕಣ್ಣು ಮಿಟುಕಿಸದೆ ನಿಂತಿದ್ದರು.

"ನಾನು ಮುಂದಿನ ವಾರ ವಾಪಸು ಹೋಗ್ತೀನಿ... ನೀವೇನಾದರೂ ಕೊಡುವುದಿದ್ದರೆ ಕೊಡಬಹುದು..."

ಉತ್ತರವಿಲ್ಲ.

"ತಿಂಡಿ-ತೀರ್ಥ... ಕೊಡುಬಳೆ ಚಕ್ಕುಲಿ..." ತಮಾಷೆ ಧಾಟಿಯಲ್ಲಿ ಹೇಳ ಹೋದೆ, ನಗು ಗಂಟಲಿನಲ್ಲೇ ಅಡಗಿಹೋಯಿತು.

"ಇದರಲ್ಲೇನೋ ಪತ್ರ-ಗಿತ್ರ ಇರಬಹುದು ... ಬೇಕಾದರೆ ಒಡೆದು ನೋಡಿ..."

ಮತ್ತೊಮ್ಮೆ ಆಕೆ ನಿರುತ್ಸಾಹದಿಂದ ಅತ್ತ ನೋಡಿದರು. ಇದ್ದಕ್ಕಿದ್ದಂತೆ ನನಗೆ ರೋಷ ಉಕ್ಕಿ ಬಂತು. "ನೋಡಿ . . . ನಾನು ಶಿವನ ಮಾತಿನ ಮೇಲೆ ಬಂದೆ... ನನಗೆ ಇದರಿಂದ ಏನು ಉಪಯೋಗ ಎಂದುಕೊಳ್ಳಬೇಡಿ . . . ನೀವು ಹೀಗೆಂತ ಗೊತ್ತಿದ್ದಿದ್ದರೆ ಖಂಡಿತ ಬರುತ್ತಿರಲಿಲ್ಲ ... ಮುಂದೆಂದೂ ಬರುವುದೂ ಇಲ್ಲ ..."

"ಕೀಕೀ ... ಕೀಕೀಕೀಕೀ ..."

ಇದ್ದಕ್ಕಿದ್ದಂತೆ ರೂಮಿನಿಂದ ಬಂದ ಕರ್ಕಶ ಧ್ವನಿಗೆ ಬೆಚ್ಚಿದೆ. ಮೆಲ್ಲನೆ ಉದ್ಗರಿಸಿದೆ. ಮತ್ತೆ ಸಾವರಿಸಿಕೊಂಡು ಹಾಗೇ ಕುಳಿತೆ. ಎದೆ ಬಾಯಿಗೆ ಬಂದಂತಾಗಿ ಧಡಧಡನೆ ಹೊಡೆದುಕೊಳ್ಳುತ್ತಿತ್ತು. ಯಾರೋ ಅಪಸ್ವರದಲ್ಲಿ ಜೋರಾಗಿ ವಯೋಲಿನ್ ನುಡಿಸುತ್ತಿದ್ದರು. ಆಕೆ ಧಡಧಡನೆ ರೂಮಿನೊಳಗೆ ಓಡಿದರು.

ವಯೋಲಿನ್ ಇನ್ನೂ ಜೋರಾಯಿತು. ವೇಗವಾಯಿತು.

"ಮರೆತು ಬಿಟ್ಯಾ ತಿಂದಿದ್ದು ಅವತ್ತು... ನಿಲ್ಲಿಸ್ತೀಯೋ ಇಲ್ವೋ ಸುಮ್ಮನೆ ..."

ವಯೋಲಿನ್ ಹಾಗೇ ಸಾಗುತ್ತಲೇ ಇತ್ತು.

"ನೀನು ಹಾಗೇ ಮಾತು ಕೇಳೋಲ್ಲ ..."

ಧಡಧಡನೆ ಹೊಡೆದ ಶಬ್ದ.

"ಅಯ್ಯೋ ಅಮ್ಮಾ ಹೊಡೀಬೇಡ್ವೆ ... ಇಲ್ಲೇ ಮಾತು ಕೇಳ್ತೀನಿ ಹೊಡೀಬೇಡ್ವೆ..."

ಹೆಣ್ಣೊಬ್ಬಳು ಮುಸುಮುಸು ಅಳುವ ಶಬ್ದ.

ಆಕೆ ಹೊರಗೆ ಬಂದಾಗ ಅವರೆದೆ ಏರಿಳಿಯುತ್ತಿತ್ತು. ಮುಷ್ಟಿಗಳು ಬಿಗಿದು ಕೊಂಡಿದ್ದವು. ನನ್ನನ್ನು ಕಂಡ ತಕ್ಷಣ, ನನ್ನನ್ನು ಮರೆತೇ ಬಿಟ್ಟವರಂತೆ ಆಶ್ಚರ್ಯದಿಂದ ನಿಂತರು. ನನಗೇಕೋ ಸಾಕೆನಿಸಿತು. ಇಲ್ಲಿಂದ ಬೇಗ ಹೋದರೆ ಸರಿ. ಏನು ಮಾಡಲೂ ತೋಚದ ಪ್ಯಾಂಟಿನ ಧೂಳು ಜಾಡಿಸಿಕೊಂಡೆ. ಸ್ನೇಹದಿಂದ 'ಪರವಾಗಿಲ್ಲ' ಎನ್ನುವಂತೆ ತಲೆಹಾಕಿಹೋದೆ. ಆಕೆ ನನ್ನನ್ನೇ ನೋಡುತ್ತಿದ್ದಳು. ಪ್ಯಾಕೆಟ್ ಹಾಗೇ ಬಿಟ್ಟು ಒಂದು ಹೆಜ್ಜೆ ಇಟ್ಟೆ.

"ಕೀಕೀಕೀ . . . ಕೀ . . ."

ಈಗ ಆಕೆ ನಿಂತಲ್ಲೇ ನಡುಗ ಹತ್ತಿದರು. ರೋಷದಿಂದ ಹಲ್ಲು ಕಡಿಯುತ್ತಾ ಒಳಗೆ ಧಾವಿಸಿದರು. "ಹಾಳು ಶನಿ, ನೀನು ಮಾತು ಕೇಳ್ತೀಯಾ... ಇದು ಸರಿಯಾದ ಬುದ್ಧಿ ಕಲಿಸ್ತೀನಿ ... ಈ ವಯೋಲಿನ್ನ ಇವತ್ತೇ ಬೆಂಕಿಗೆ ಹಾಕಿಬಿಡ್ತೀನಿ ... ಅವನು ಹೇಳ್ತಾ ಇದ್ದಿದ್ದು ಸರೀನೇ... ನಾನು ಪಾಪಾಂತ ಬಿಟ್ಟಿದ್ದು ನನ್ನ ತಪ್ಪು ..."

"ಬೇಡ್ವೇ ಅಮ್ಮಾ ... ಆ ವಯೋಲಿನ್ ಏನೇ ಬೇಡ್ವೇ... ನಂಕೊಟ್ಬಿಡು... ನಾನದನ್ನೆಂದೂ ನುಡಿಸೊಲ್ಲ... ನನ್ನಾಣೆ, ನಿನ್ನಾಣೆ, ಶಿವನಾಣೆ... ಅಮ್ಮ ಬೇಡ್ವೆ ..."


ಬಾಗಿಲು ದಢಾರನೆ ಬಡಿಯಿತು. ನಾನು ಅಲ್ಲಿಂದ

(ಪುಟ 6ಕ್ಕೆ)

ಸಂದರ್ಶನ

# 'ಕರ್ನಾಟಕ ಮಲ್ಲ'ದ ಸಂಪಾದಕರಾದ ಶ್ರೀ ಚಂದ್ರಶೇಖರ ಪಾಲೆತ್ತಾಡಿ ಅವರೊಂದಿಗೆ ಸಂದರ್ಶನ

● ರೇಖಾ



ಚಿತ್ರದಲ್ಲಿ ರೇಖಾರವರು, ಚಂದ್ರಶೇಖರ ಪಾಲೆತ್ತಾಡಿ ಯವರೊಂದಿಗೆ ಸಂದರ್ಶನ ನಡೆಸುತ್ತಿದ್ದಾರೆ

ಮುಂಬೈಯ ಗಡಿಬಿಡಿಯ ಯಾಂತ್ರಿಕ ಬದುಕಲ್ಲೂ ಬಹಳಷ್ಟು ಜನರ ದಿನಚರಿಯ ಬಹುಮುಖ್ಯ ಕಾರ್ಯಕ್ರಮ ವೃತ್ತ ಪತ್ರಿಕೆ ಓದುವುದರಿಂದ ಪ್ರಾರಂಭವಾಗುತ್ತದೆ. ಸ್ವಲ್ಪ ತಡವಾದರೂ ವೃತ್ತ ಪತ್ರಿಕೆಗಾಗಿ ಕಾತರಿಸಿ ಓದಿದಾಗಷ್ಟೇ ಅವರಿಗೆ ಸಮಾಧಾನ. ವರ್ತಮಾನ ಪತ್ರಿಕೆಯನ್ನು ತಮ್ಮ ನಾಡಿನ ಭಾಷೆಯಲ್ಲಿ ಓದುವ ಅನುಭವ ಹಲವರಿಗಾದರೂ ಅತ್ಯಂತ ಆತ್ಮೀಯ ದಾಟಿಯದಾಗಿರುತ್ತದೆ. ಅಷ್ಟೇ ಅಲ್ಲದೆ ಇತರ ಭಾಷೆಗಳು ಬಾರದ ತೊಡಕಗಳನ್ನು ನಿವಾರಿಸುತ್ತದೆ.

ಮುಂಬೈನಿಂದಲೇ 1992ರಲ್ಲಿ ಕನ್ನಡದಲ್ಲೇ ಪ್ರಕಟಗೊಳ್ಳ ತೊಡಗಿದ 'ಉದಯರಾಗ' ಮತ್ತು 'ಕರ್ನಾಟಕ ಮಲ್ಲ' ವೃತ್ತಪತ್ರಿಕೆಗಳನ್ನು ಇಲ್ಲಿಯ ಕನ್ನಡಿಗರು ಸಂಭ್ರಮದಿಂದ ಸ್ವಾಗತಿಸಿದ್ದರು. 'ಉದಯರಾಗ' ಕೆಲವು ತಿಂಗಳು ಪ್ರಕಟಗೊಂಡು ನಿಂತರೂ 'ಕರ್ನಾಟಕ ಮಲ್ಲ' ಆರೋಗ್ಯಕರ ರೀತಿಯಲ್ಲಿ ಬೆಳವಣಿಗೆ ಕಾಣುತ್ತಿದೆ. 'ಈ ಸಂಜೆ ಸುದ್ದಿ', 'ಕರ್ನಾಟಕ ಮಲ್ಲ' ದೊಂದಿಗೆ ಸದ್ಯದಲ್ಲಿ ಕನ್ನಡ ಭಾಷಾಭಿಮಾನಿಗಳನ್ನು ತಣಿಸುತ್ತಿರುವಮತ್ತೊಂದು ಕನ್ನಡ ವೃತ್ತ ಪತ್ರಿಕೆ.

ಪ್ರತಿದಿನ ವೃತ್ತ ಪತ್ರಿಕೆ ಪ್ರಕಟಗೊಳಿಸುವ ಹಿನ್ನಲೆಯಲ್ಲಿ ಹಲವಾರು ಜನರ ಶ್ರಮವಿರುತ್ತದೆ. ಇವರೆಲ್ಲರ ಮುಂಚೂಣಿಯಲ್ಲಿ ಸಂಪಾದಕರಿದ್ದು ವೃತ್ತ ಪತ್ರಿಕೆಗೆ ದಿಕ್ಸೂಚಿಯಂತಾಗಿ ಅವರ ಹೊಣೆ ಜವಾಬ್ದಾರಿಗಳು ಮುಖ್ಯವೆನಿಸುತ್ತದೆ. ಸುದ್ದಿ ಸಮಾಚಾರಗಳಿಗೆ ಕನ್ನಡದ ದನಿಯನ್ನು ಕೊಟ್ಟು ಜನರಿಗೆ ತಲುಪಿಸುತ್ತಿರುವ 'ಕರ್ನಾಟಕ ಮಲ್ಲ' ದ ಹಿಂದಿನ ಸ್ಫೂರ್ತಿ ಶ್ರೀ ಚಂದ್ರಶೇಖರ ಪಾಲೆತ್ತಾಡಿ ಅವರದು. 'ನೇಸರು'ಗಾಗಿ ಧರಾವಿಯ ಪತ್ರಿಕೆಯ ಕಛೇರಿಯಲ್ಲಿ ಶ್ರೀ ಚಂದ್ರಶೇಖರ ಅವರನ್ನು ಸಂದರ್ಶಿಸಿದೆ. ಶ್ರೀ ಚಂದ್ರಶೇಖರ್ ಅವರಿಗಾಗಿ ಕಾಯುತ್ತಿರುವಾಗ ಅಲ್ಲಿಯ ಮಿತ್ರರು ಆದರದಿಂದ ನೋಡಿಕೊಂಡರು. ಪತ್ರಿಕೆಯ ಕಛೇರಿಯ ಚಟುವಟಿಕೆಗಳನ್ನು ಹತ್ತಿರದಿಂದ ಒಂದೆರಡು ಘಂಟೆಗಳು ನೋಡಿದ್ದು ಸಂದರ್ಶನಕ್ಕೆ ಬೇಕಾದ ಮಾನಸಿಕ ಸಿದ್ಧತೆ ಮಾಡಿಕೊಳ್ಳಲು ಅನುವಾಯ್ತು. ಶ್ರೀ ಚಂದ್ರಶೇಖರ ಪಾಲೆತ್ತಾಡಿಯವರು 'ತಡವಾದಕ್ಕೆ ಕ್ಷಮಿಸಿ' ಎಂದು ಹೇಳುತ್ತಲೇ ಬಂದರು ಸಂದರ್ಶನ ನೇರವಾಗಿ ಶುರುಮಾಡಿದೆ.

**ನಿಮ್ಮ ವಿದ್ಯಾಭ್ಯಾಸದಿಂದ ಬಗ್ಗೆ ತಿಳಿಸಿಕೊಡ್ತೀರಾ.**

ದಕ್ಷಿಣ ಕನ್ನಡದ ಪುತ್ತೂರು ತಾಲೂಕಿನ ಬಜತ್ತೂರು ಗ್ರಾಮಕ್ಕೆ ಸೇರಿದವನು ನಾನು. 'ಪಾಲೆತ್ತಾಡಿ' ನಮ್ಮ ಮನೆಯ ಹೆಸರು. ಪ್ರಾಥಮಿಕ ಹಾಗೂ ಸೆಂಕಡರಿ ಶಿಕ್ಷಣ ಬಜತ್ತೂರಿನಲ್ಲಿ ಆಯ್ತು. ಉಪ್ಪಿನಂಗಡಿಯಲ್ಲಿ B.A. ಮಾಡಿದೆ. 'ಮಂಗಳ ಗಂಗೋತ್ರಿ'ಯಲ್ಲಿ Political Science M.A. ಮಾಡಿದೆ.

**ಪತ್ರಿಕೋದ್ಯಮಕ್ಕೆ ಬಂದದ್ದು ಹೇಗೆ?**

ಪತ್ರಿಕೋದ್ಯಮಕ್ಕೆ ಬಂದದ್ದು ಆಕಸ್ಮಿಕ. ಶಿಕ್ಷಕನಾಗಲು ನಂಗೆ ತುಂಬಾ ಆಸಕ್ತಿಯಿತ್ತು. ಸ್ವಲ್ಪದಿನ ಮುಲ್ಕಿಯ ವಿಜಯ ಕಾಲೇಜಿನಲ್ಲಿ ಹಂಗಾಮಿ ಉಪನ್ಯಾಸಕನಾಗಿ ಕೆಲಸಮಾಡಿದ್ದೇನೆ. ಮಂಗಳೂರಿನಲ್ಲಿ 'ಹೊಸದಿಗಂತ' ಎಂಬ ಪತ್ರಿಕೆಯ sub-editor ಆಗಿ ಪತ್ರಿಕೋದ್ಯಮಕ್ಕೆ ಕಾಲಿಟ್ಟೆ. ನಂತರ ಶ್ರೀ ಮಲ್ಲಿಕಾರ್ಜುನಯ್ಯ ಅವರ 'ಮಂಗಳೂರು ಮಿತ್ರ' ಯೆಂಬ ಪತ್ರಿಕೆಯಲ್ಲಿ ಕೆಲಸ ಮಾಡಿದೆ. 1992ರಲ್ಲಿ ಮುಂಬೈನಲ್ಲಿ 'ಕರ್ನಾಟಕ ಮಲ್ಲ' ಶುರುಮಾಡಿದಾಗ ಇಲ್ಲಿಗೆ ಬಂದೆ.

**ಪತ್ರಿಕೋದ್ಯಮದಲ್ಲಿ ನಿಮಗೆ ಆಸಕ್ತಿ ಮೂಡಿದ್ದು ಹೇಗೆ?**

ಮಂಗಳೂರಿನಲ್ಲಿ ಖ್ಯಾತ ಪತ್ರಿಕೋದ್ಯಮಿ ಒಡ್ಡರಸ ರಘುರಾಮ ಶೆಟ್ಟರು 'ಮುಂಗಾರು'ಯೆಂಬ ಪತ್ರಿಕೆ ನಡೆಸುತ್ತಿದ್ದರು. ಅದರಲ್ಲಿ Marx ಬಗ್ಗೆ ಬಂದ ಒಂದು ಲೇಖನಕ್ಕೆ ಪತ್ರಿಕೆಯಲ್ಲಿ ಪ್ರತಿಕ್ರಿಯಾತ್ಮಕ ಸಂವಾದ ನನಗೂ ಲೇಖಕರಿಗೂ ನಡೀತು. ಇದರಿಂದಾಗಿ ನನ್ನಲ್ಲಿ ವಿಶ್ವಾಸ ಆಸಕ್ತಿ ಮೂಡಿತು.

**ಪತ್ರಕರ್ತನಾಗಲು ಅರ್ಹತೆ ಏನಿರಬೇಕು?**

ಅನುಭವ, ಆಸಕ್ತಿ, ಪರಿಸ್ಥಿತಿಯ ಸೂಕ್ಷ್ಮ ಗ್ರಹಿಕೆ, ಅವಲೋಕನೆ ಯಾವುದೇ ಪದವಿಗಿಂತ ಅಗತ್ಯ. ಅನ್ನಿಸ್ತೇ. Journalism ಬಗ್ಗೆ ಸಾಕಷ್ಟು Courseಗಳಿವೆ. ಅದರಿಂದ ಸಹಾಯವಾಗ ಬಹುದಾದರೂ ನನ್ನ ಮಟ್ಟಿಗೆ ಹೇಳಬಹುದಾದರೆ ಆಸಕ್ತಿಯೊಂದನ್ನು ಬಿಟ್ಟರೆ ಯಾವುದೇ special qualification ನಂಗಿಲ್ಲ.

**ನಿಮ್ಮ ಮೇಲೆ ಪ್ರಭಾವ ಬೀರಿದ ಚಿಂತಕರಾರು?**

ಒಂದು ರೀತಿಯಲ್ಲಿ Marxನಿಂದ ಪ್ರಭಾವಿತನಾದವನು ನಾನು...

**ಕಾಲ ಸರಿದಂತೆ ಎಲ್ಲಾ ಇಸಂಗಳು ಅರ್ಥ ಬದಲಾಗಿ ಬಿಡುತ್ತಿದ್ದಲ್ಲವೆ?**

Marx ಹೇಳಿದ dilecticism ಎಲ್ಲಾ ಕಾಲಕ್ಕೂ ಒಪ್ಪಿಗೆಯಾಗುವಂತದು. Marxism ಇಂದು ಬರೀ Theoryಯಾಗಿ ಉಳಿಯಲು ರಾಜಕೀಯ ಒತ್ತಡಗಳು ಕಾರಣ. ಸಾಮೂಹಿಕ ಚಳುವಳಿ ಸಂಘಟಿಸಲು ಸಾಧ್ಯವಾಗದೆ ಹೋಗಿದೆ. ಲೋಹಿಯ ವಾದ ಸಮಾಜವಾದಗಳು ಕೂಡಾ ಅಡ್ಡಿಯಾಗಿದ್ದೆಂತ ನನ್ನ ಭಾವನೆ.

**'ಕರ್ನಾಟಕ ಮಲ್ಲ' ಪ್ರಕಟಿಸಲು ಹಿಂದಿದ್ದ ಪ್ರೇರಣೆಗಳೇನು?**

ಪ್ರೇರಣೆ ಅನ್ನೋದಕ್ಕಿಂತ ಇದು ಒಂದು ರೀತಿಯಲ್ಲಿ ಶ್ರೀ ಮಲ್ಲಿಕಾರ್ಜುನಯ್ಯ ಅವರ ಸಾಹಸ ಅಂತ ಹೇಳಬಯಸುತ್ತೇನೆ. ಅವರು ಪ್ರಕಟಿಸುತ್ತಿದ್ದ 'Police News' ಇಲ್ಲಿ 9000ಪ್ರತಿಗಳು ಮಾರಾಟ ಆಗ್ತಿತ್ತು ಅನ್ನೋ ಸಂಗತಿ ಅವರನ್ನು ಈ ರೀತಿಯ ಸಾಹಸಕ್ಕೆ ಕೈ ಹಚ್ಚುವಂತೆ ಮಾಡಿತು.

**'ಕರ್ನಾಟಕ ಮಲ್ಲ' ರೂಪುಗೊಂಡ ಉದ್ದೇಶವೇನು?**

ರಾಜಕೀಯ, ಧರ್ಮ, ಮತ - ಪಂಥಗಳಿಂದ ದೂರವಾಗಿ ಕನ್ನಡಿಗರ ಧ್ವನಿಯಾಗಿರುವುದೇ ಮಲ್ಲನ ಉದ್ದೇಶ.

**'ಕರ್ನಾಟಕ ಮಲ್ಲ' ದಲ್ಲಿ ನೀವೇನು ಬರೀತೀರಿ?**

ಸಂಪಾದಕೀಯ ಬರೀತೀನಿ ವಾರಕ್ಕೊಮ್ಮೆ 'ಇದು ಭಾರತ' ಅನ್ನೋ ಅಂಕಣ ಬರೀತೀನಿ. 'ಇದು ಭಾರತ' ಭಾರತದ ವ್ಯಾಪ್ತಿಯಲ್ಲಿ ರಾಜಕೀಯದಲ್ಲಿನ

ಆಗುಹೋಗುಗಳು ಕುರಿತು ಬರೆದದ್ದು. ನಾನು ನಡೆಯುವಂತೆ ಬರೆಯುತ್ತೇನೆ. ನುಡಿದಂತೆ ನಡೆಯಬೇಕೆಂಬ ಚಿಂತನೆಯಿಂದ ಬೆಳೆದವನು ನಾನು. ಹಾಗಾಗಿ ನನ್ನನ್ನೇ ಅಳವಡಿಸಿಕೊಂಡು ಬರೀತೀನಿ.

**ನಿಮ್ಮ ಪತ್ರಿಕೆಯ ಬೆಳವಣಿಗೆಯ ಬಗ್ಗೆ ತಿಳಿಸಿಕೊಡಿ.**

'ಕರ್ನಾಟಕ ಮಲ್ಲ' ಶುರುವಾದದ್ದು 1992ರಲ್ಲಿ. ಅದೇ ಸಮಯದಲ್ಲಿ 'ಉದಯರಾಗ'ಯೆಂಬ ಪತ್ರಿಕೆ ಕೂಡ ಪ್ರಕಟ ಆಗಿತ್ತು, ಅದು ಕೆಲವೇ ತಿಂಗಳು ಪ್ರಕಟಗೊಂಡು ನಿಂತು ಹೋಯ್ತು. 92ರಲ್ಲಿ 3500 ಪತ್ರಿಕೆ ಅಚ್ಚಾಗ್ತಿತ್ತು. ಈಗ 20,000 ಪತ್ರಿಕೆಗಳು ಅಚ್ಚಾಗ್ತಾಯಿದೆ. ಸಂಖ್ಯೆಯ ದೃಷ್ಟಿಯಿಂದ ಅದು ಗಣನೀಯ ಬೆಳವಣಿಗೆ ಅಂತ ಹೇಳಹುದಲ್ಲವೇ?

ಪೂನಾ, ನಾಸಿಕ್ ಮುಂತಾದ ಮಹಾರಾಷ್ಟ್ರದ ದೊಡ್ಡ ಪಟ್ಟಣಗಳಿಗೆ ಈ ಪತ್ರಿಕೆ ಹೋಗುತ್ತದೆ. ಮೊದಲು 8 ಪುಟಗಳ ಪತ್ರಿಕೆಯನ್ನು 2-50 ರೂಪಾಯಿಗಳಿಗೆ ಕೊಡ್ತಿದ್ವಿ. ಓದುಗರು ದರ ಹೆಚ್ಚೆಂದು ಅಭಿಪ್ರಾಯ ಪಟ್ಟಿದ್ದರಿಂದ ಹಾಗೂ ಸುದ್ದಿಯ ಅಭಾವದಿಂದ 6 ಪುಟಗಳನ್ನು 2 ರೂಪಾಯಿಗಳಿಗೆ ಕೊಡ್ತೀವಿ.

ಪುಸ್ತಕದ ರೂಪದಲ್ಲಿ ದೀಪಾವಳಿ ಸಂಚಿಕೆ ಕಳೆದ ವರ್ಷ ಪ್ರಕಟ ಮಾಡಿದ್ವಿ.

**ವೃತ್ತ ಪತ್ರಿಕೆಯ ಸುದ್ದಿಗಳ ಅಧಿಕೃತತೆಯ ನಿವೇನು ಹೇಳ್ತೀರಿ?**

ಅಧಿಕೃತ ಸುದ್ದಿಗಳಾಗಿರೋದಿಂದಲೇ ಅದು ಪ್ರಕಟ ಆಗುವ ಅರ್ಹತೆ ಪಡೆದಿರತ್ತೆ. ಯಾವುದೇ ಸುದ್ದಿಯನ್ನು ವೈಭವೀಕರಿಸಿಸೋದು. ಅಥವಾ ತುಚ್ಛವಾಗಿ ಬರೆಯೋದು ನಮ್ಮ ರೀತಿಯಲ್ಲ. ವ್ಯಕ್ತಿ ನಿಷ್ಠೆಗಿಂತ ವಸ್ತು ನಿಷ್ಠತೆಯ ಬಗ್ಗೆ ಪತ್ರಿಕೆಗಳು ಕಾಳಜಿ ವಹಿಸಬೇಕಾಗುತ್ತದೆ.

**ದಕ್ಷಿಣ ಕನ್ನಡದ ಸುದ್ದಿ ನಿಮ್ಮ ಪತ್ರಿಕೇಲಿ ಹೆಚ್ಚಲ್ಲವೆ?**

ಓದುವವರೂ ಅವರೇ ಅಲ್ಲವೇ? ನಮಗೆ ಬೆಂಬಲ ಹೋಟೆಲು ಉದ್ಯಮ ಆಗಿರೋದಿಂದ ಅವರಿಗೆ ಆಸಕ್ತಿ ಉಂಟು ಮಾಡುವ ಸುದ್ದಿ ಹಾಕಬೇಕಾಗುತ್ತೆ.

**ವೃತ್ತ ಪತ್ರಿಕೆಗಳ ಹೊಣೆ ಜವಾಬ್ದಾರಿಗಳನ್ನು ಯಾವ ರೀತಿ ನೀವು ವಿವರಿಸ್ತೀರಿ?**

ವೃತ್ತ ಪತ್ರಿಕೆ ಸಮಾಜಕ್ಕೆ ಒಳ್ಳೆಯ ಚಿಂತನೆ ಕೊಡಬೇಕು. ಜನಸಾಮಾನ್ಯ ಒಟ್ಟಾರೆ ರಾಜಕೀಯ, ಸಾಮಾಜಿಕ ಅರಿವು ಮೂಡಿಸಲು ಪ್ರೇರಣೆಯಂತಿರಬೇಕು.

Bofors ಹಗರಣ ಹೊರ ಬಂದದ್ದು ವೃತ್ತ ಪತ್ರಿಕೆಯಿಂದಲ್ಲವೆ? ಕರ್ನಾಟಕದಲ್ಲೂ ಚುನಾವಣೆಯಲ್ಲಿ ಜನತಾ ದಳ ಬರಲು ಈ ಮಾಧ್ಯಮ ಪ್ರತ್ಯಕ್ಷವಾಗಲ್ಲದಿದ್ದರೂ ಪರೋಕ್ಷವಾಗಿ ಪ್ರಭಾವ ಉಂಟು ಮಾಡಿದೆ.

**ಒಂದಲ್ಲ ಒಂದು Scamಗಳ ಬಗ್ಗೆ ಬರೀತೀರಾ. ಸಮಯ ಸರಿದಂತೆ ಹೊಸ Scamಗಳಿಂದ ಹಳೆಯದು ಮರೆಯಾಗಿ ಬಿಡುತ್ತೆ ಅಲ್ಲವೆ?**

Follow up ಮಾಡಿinvestigative reporting ಈಗ ಹೋಗಿದೆ. Indian Expressನವರು ಈ ಪ್ರಯತ್ನ ಮಾಡ್ತಾರೆ. ಆದ್ರೆ ಅವರಿಗೆ Market ಇಲ್ಲ.

**ಎಷ್ಟಾದ್ರೂ ಅಡಿಗರು ಹೇಳಿದಂತೆ 'ವರ್ತಮಾನ ಪತ್ರಿಕೆಯು ತುಂಬಾ ಭೂತದ ಸುದ್ದಿ' ಅಲ್ಲವೇ?**

ನಕ್ಕರು

**ನಿಮ್ಮ ವೃತ್ತಿಯಿಂದ ನಿಮಗೆ ಸಂತೃಪ್ತಿ ಸಿಕ್ಕಿದೆಯೇ?**

ಖಂಡಿತವಾಗಿ I am happy to be a journalist.

ಹಾಗೇ ಮಾತುಕತೆ ಮುಂದುವರೆಸುತ್ತಾ ಪ್ರಧಾನಿ ದೇವೇಗೌಡರಿಂದ ಕರ್ನಾಟಕಕ್ಕೆ ಪ್ರಾಮುಖ್ಯತೆ ಸಿಕ್ಕಿದೆ. ರಾಜಕುಮಾರರಿಗೆ ಫಾಲ್ಕೆ ಪ್ರಶಸ್ತಿ ಸಿಕ್ಕಿರುವುದು ಕನ್ನಡ ನಾಡಿನ ಹೆಮ್ಮೆ ಹೆಚ್ಚಿಸಿದೆ. ಕನ್ನಡ Neglet ಮಾಡುವ ಭಾಷೆಯಲ್ಲ ಅಂತ ದೇಶದ ಜನರಿಗೆ ತಿಳೀತಿದೆ ಅಂದಾಗ ಕರ್ನಾಟಕ, ಕನ್ನಡದ ಬಗ್ಗೆ ಅವರಿಗಿರುವ ಅಭಿಮಾನ ಅವರ ದನಿಯಲ್ಲಿ ಮೂಡಿ ಬಂದಿತ್ತು. ತಾಳ್ಮೆಯಿಂದ ಮಾತನಾಡುತ್ತಿದ್ದ ಚಂದ್ರಶೇಖರ್ ಅವರ ಸಾಕಷ್ಟು ಸಮಯ ನಾವಾಗಲೇ ತೆಗೆದುಕೊಂಡಿದ್ವೆ. ಧನ್ಯವಾದಗಳನ್ನು ಹೇಳ್ತಾ ಎದ್ದಾಗ ಅವರಿಂದ ಕೇಳಿ ಬಂದದ್ದೂ ವಿನಮ್ರತೆಯ Thank you.

## ಅಭಿನಂದನೆಗಳು



ಅಸೋಸಿಯೇಷನ್ನಿನ ಸದಸ್ಯರಾದ ಶ್ರೀಮತಿ ಮತ್ತು ಶ್ರೀ ಸಿ. ಎಸ್. ಶಂಕರನಾರಾಯಣ ಅವರ ಮಗಳು ಕುಮಾರಿ ಅಪರ್ಣಾ ಶಂಕರನಾರಾಯಣ 1996ನೇ ಸಾಲಿನ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಶೇಕಡ 84.93 ಅಂಕಗಳನ್ನು ಗಳಿಸಿದ್ದಾಳೆ. ಅಪರ್ಣಾ ಸಯಾನ್‌ನ ಲಿಟಲ್ ಏಂಜಲ್ಸ್ ಹೈ ಸ್ಕೂಲಿನ ವಿದ್ಯಾರ್ಥಿನಿ. 'ನೇಸರು'ವಿನ ಪರವಾಗಿ ಅಪರ್ಣಾಗೆ ಶುಭಹಾರೈಕೆಗಳು.

## '...ರಿ ಪ್ರಸನ್ನ'

(ಪುಟ 4ರಿಂದ)

ಹೊರಟೆ. ಇನ್ನು ಆಕೆಗೆ ಹೇಳಲು ಕಾಯುವುದರಲ್ಲಿ ಪ್ರಯೋಜನವಿಲ್ಲವೆಂದುಕೊಂಡು, ವರಾಂಡಾಗೆ ಬಂದೆ. ಹಿಂದಿರುಗಿ ನೋಡಿದೆ. ಬಾಗಿಲು ಹಾಗೇ ತೆಗೆದುಕೊಂಡಿತ್ತು. ನಾನು ವಾಪಸ್ಸು ಹೋಗಿ ಅದನ್ನು ಮುಚ್ಚಿ ಭದ್ರಪಡಿಸಿದೆ. ತಿರುಗಿ ಬಂದು ಮೆಟ್ಟಿಲ ಮೇಲೆ ನಿಂತಾಗ ಕಾಲುಗಳು ನಡುಗುತ್ತಿದ್ದುವು. ಸಾವರಿಸಿಕೊಳ್ಳಲೆಂದು ಹಾಗೇ ಕುಳಿತೆ. ದಿನವೆಲ್ಲಾ ಬಿಸಿಲಲ್ಲಿ ಕಾದಿದ್ದ ಮೆಟ್ಟಿಲು ಬೆಚ್ಚಗಿತ್ತು. ಹಾಯೆನಿಸಿತು. ಸಂಜೆ ಕತ್ತಲಾಗುತ್ತಿತ್ತು. ತಲೆ ಎತ್ತಿ ನೋಡಿದೆ. ಬೆಳಗ್ಗೆಯೆಲ್ಲಾ ನಿರಭ್ರವಾಗಿದ್ದ ಆಕಾಶದಲ್ಲಿ ಇದ್ದಕ್ಕಿದ್ದಂತೆ ದಟ್ಟವಾದ ಮೋಡಗಳು ಕೂಡುತ್ತಿದ್ದವು. ಮಳೆ ತುಂಬಿದ ಮೋಡಗಳು. ಹಾಗೇ ಕಣ್ಮುಚ್ಚಿದೆ.

. . . ಮೋಡಗಳು ಮತ್ತಷ್ಟು ದಟ್ಟವಾದವು. ತಲೆ ಮೇಲೆ ಬಂದುವು. ಜೊತೆಗೆ ಗುಡುಗು, ಮಿಂಚು, ತಣ್ಣನೆಯ ಸುಂಯ್ಯನೆ ಗಾಳಿ. ಸ್ವಲ್ಪವಾಗಿ ಶುರುವಾದ ಮಳೆ ಧಾರಾಕಾರವಾಗಿ ಸುರಿಯತೊಡಗಿತು. ನಿಮಿಷಗಳಲ್ಲೇ ಮನೆಯನ್ನು ತೋಯಿಸಿದ ಮಳೆ ಉಳಿದಿದ್ದ 'ರಿ ಪ್ರಸನ್ನ' ಅಕ್ಷರಗಳನ್ನೂ ನೋಡುನೋಡುತ್ತಿದಂತೆಯೇ ಕೊಚ್ಚಿ ಹಾಕಿತು. ಹೊಸ ಹೆಸರಿಗಾಗಿ ಕಾದು ನಿಂತಂತೆ ಕಾಣತೊಡಗಿತು ಮನೆ. ಮಳೆ ನೀರು ನನ್ನ ತಲೆ ಮೇಲಿಂದ ಸುರಿದು, ಕೂದಲು ತೊಪ್ಪೆ ಮಾಡಿ ಕಣ್ಣು ಮೂಗು ತುಟಿಗಳ ಮೇಲಿಂದ ಹರಿದು ಮೈಯೆಲ್ಲಾ ತೋಯಿಸಿತು. ಸುತ್ತಲಿನ ಒಣನೆಲ ಖುಷಿಯಾಗಿ ಘಂ ಎನ್ನತೊಡಗಿತು. ಹುಲ್ಲಿನ ಗರಿಕೆಗಳು ಮುದಗೊಂಡು ನಾಚಿ ತಲೆತಗ್ಗಿಸಿದುವು. ಹೂಗಳ ಪಕಳೆಗಳು ಮೈಮೇಲೆ ಕೂತ ಹನಿಗಳನ್ನು ಕಂಡು ರೋಮಾಂಚಗೊಂಡವು. ಕುಂಡದಲ್ಲಿದ್ದ ಫರ್ನಿನ ಮೈತುಂಬಾ ಪುಟ್ಟ ಬಿಳಿ ಹೂಗಳು ನಳನಳಿಸಿದವು. ನಾಯಿಮನೆಯಿಂದ ತುಂಬುತ್ಸಾಹದ ಅಲ್ಸೇಷಿಯನ್ ಬಂದು ಬಂದು ನನ್ನ ಪ್ಯಾಂಟಿಗೆ ಮೈ ಉಜ್ಜುತ್ತಾ ಬಾಲವಲ್ಲಾಡಿಸಿತು. ಅಂಗಳದಲ್ಲಿದ್ದ ಬೆತ್ತಲೆ ಮಕ್ಕಳು ಎತ್ತಿಹಿಡಿದ ಕಾರಂಜಿಯಿಂದ ನೀರು ಉಕ್ಕಿ ಹರಿಯತೊಡಗಿತು. ಮನೆಯೊಳಗಿಂದ ಇಂಪಾಗಿ ತೋಡಿರಾಗ ವಯೋಲಿನ್‌ನಿಂದ ತೇಲಿಬರ ತೊಡಗಿತು... ನಾನು ಕೂತಲ್ಲಿಂದಲೇ ಹಿಂದಿರುಗಿ ನೋಡಿದೆ. ಸುಂದರ ಹುಡುಗಿಯೊಬ್ಬಳು ತಲೆತಗ್ಗಿಸಿ ಕುಳಿತು ವಯೋಲಿನ್ ನುಡಿಸುತ್ತಿದ್ದಳು. ಅವಳ ತಲೆ ಬಾಗಿತ್ತು. ಅವಳ ಮುಂದೆ ಶಿವ ಕಳಿಸಿದ ಪ್ಯಾಕೆಟ್ ಬಿಚ್ಚಿಟ್ಟಿತ್ತು. ಅದರಲ್ಲಿ ಹಸಿರಿಂಚಿನ ಹಳದಿ ಸೀರೆ, ಹಸಿರು ಗಾಜಿನ ಬಳೆಗಳು...

# ಅಧ್ಯಾತ್ಮ ಜೀವನದ ಚೆಲುವು

ಒಂದು ಯೋಜನೆಗನುಸಾರವಾಗಿ ಜೀವನವನ್ನು ವ್ಯವಸ್ಥೆಗೊಳಿಸಲು ನಾವು ಯತ್ನಿಸುತ್ತೇವೆ. ನಮಗೆ ನಿರ್ದಿಷ್ಟ ಗುರಿಗಳಿವೆ. ಅದನ್ನು ಸಾಧಿಸುವತ್ತ ಶ್ರಮಿಸುತ್ತೇವೆ. ನಮ್ಮ ಸಾಧನೆಗನುಗುಣವಾಗಿ ಗುರಿಗಳೂ ಬದಲಾಯಿಸುತ್ತೇವೆ ಎಂಬುದು ನಿಜ. ಪ್ರತಿನಿತ್ಯ ನಮ್ಮ ವೇಳಾಪಟ್ಟಿ, ಗೆಳೆಯರಿಗಾಗಿ ನಮ್ಮ ಸಮಯ, ನಮಗೆಂದೇ ಮೀಸಲಿರಿಸುವ ಕಾಲ, ಎಲ್ಲವೂ ನಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗಿರುತ್ತದೆ. ಚೌಕಟ್ಟು ಅಲ್ಲಿದೆ, ಅಗತ್ಯ ವಿವರಗಳೂ ಇದೆ. ಈ ವ್ಯವಸ್ಥೆಯಲ್ಲಿ ಧ್ಯಾನ, ಅಧ್ಯಾತ್ಮ ಸಾಧನಗಳನ್ನೂ ಹೇಗೋ ಸೇರಿಸುತ್ತೇವೆ. ಸಾಮಾನ್ಯವಾಗಿ ಇವೆಲ್ಲವೂ ಅತ್ಯಂತ ಖಚಿತವಾದ ಲಕ್ಷ್ಮಣರೇಖೆಗಳು. ಹಲವೊಮ್ಮೆ ಧ್ಯಾನದ ವೇಳೆಯಲ್ಲಿ ಕಡಿತವಾಗುತ್ತದೆ. ಏಕೆಂದರೆ, ಬದುಕಿನ ಇತರ ಅಗತ್ಯಗಳು ಎಲ್ಲವನ್ನೂ ನುಂಗಿ ಬಿಡುತ್ತವೆ.

ಬದುಕಿನಲ್ಲಿ ಅಧ್ಯಾತ್ಮ ಸಾಧನೆಯನ್ನು ಸಂಯೋಜಿಸಲು, ಅದನ್ನು ಸದಾ ಅಂತರ್ಜಲವಾಗಿಸಲು ಏನಾದರೂ ದಾರಿ ಹುಡುಕಲೇಬೇಕು. ಆಶ್ರಮ-ತಪೋವನಗಳ ಸಂದರ್ಶನ, ಯಾತ್ರೆ, ಅಂತರ್ಮುಖತೆ, ಇವುಗಳಷ್ಟೇ ನಮ್ಮ ಅಧ್ಯಾತ್ಮ ಜೀವನವನ್ನು ಸೀಮಿತಗೊಳಿಸಬಾರದು. ಏಕೆಂದರೆ ಇವೆಲ್ಲವೂ ಕಡಿಮೆ ಅವಧಿಯವು. ಆಗೊಮ್ಮೆ ಈಗೊಮ್ಮೆ ನಡೆಯುವಂತಹವು. ಅನೇಕ ವೇಳೆ ಸಂದರ್ಭಗಳು ಈ ಸೌಭಾಗ್ಯಗಳಿಂದ ನಮ್ಮನ್ನು ವಂಚಿಸುತ್ತವೆ. ಆದುದರಿಂದ `ಸಾಧನೆ-ವಿವೇಕ'ಗಳನ್ನು ಜೊತೆಗೂಡಿಸಿಕೊಳ್ಳುವ ಅಗತ್ಯ. ಅಧ್ಯಾತ್ಮ ಜೀವನದ ಚೆಲುವನ್ನೂ ಅದರ ವಿಕಾಸವನ್ನೂ ಬದುಕಿನಲ್ಲಿಯೇ - ಕರ್ಮ, ಅಕರ್ಮ, ಉದ್ಯೋಗ, ವಿನೋದ ಇತ್ಯಾದಿಗಳಲ್ಲಿಯೇ ಕಂಡುಕೊಳ್ಳಬೇಕು. ತನ್ನಲ್ಲಿಯೆ ತಾನು ಮುಳುಗುವಂತಾದಾಗಲೂ ಸರಿಯೇ, ಹಾಗಿಲ್ಲದಿದ್ದರೆ, ಅಧ್ಯಾತ್ಮ ಸಾಧನಗಳು ವಿರಕ್ತಿ, ಆಗೀಗ ಕೊಂಚ ಮನಃಶಾಂತಿ, ಮುಂತಾದ ಸಣ್ಣ ಪುಟ್ಟ ಫಲಗಳನ್ನು ಮಾತ್ರ ದೊರಕಿಸುತ್ತದೆ. ನೈಜವಾದ ಪರಿವರ್ತನೆ ಇರುವುದಿಲ್ಲ, ಎಲ್ಲವನ್ನೂ ಆವರಿಸುವ ನವ ಆನಂದದ ಹೆಬ್ಬಾಗಿಲು ತೆರೆಯುವುದಿಲ್ಲ. ಈ ಸಂದರ್ಭದಲ್ಲಿಯೇ ಶ್ರೀ ರಮಣರ ಬೋಧನೆಗಳು ಪ್ರಮುಖವೂ ಮಹತ್ವಪೂರ್ಣವೂ ಆಗುವುದು.

``ಧ್ಯಾನವು ಆತ್ಮಜ್ಞಾನವನ್ನು ಹೊಂದುವ ಗುರಿಯತ್ತ ಕ್ರಮಬದ್ಧವಾದ ಸಾಧನೆ'' ಎಂದು ರಮಣರು ಹೇಳುತ್ತಾರೆ. ಏಕೆ? ಏಕೆಂದರೆ, ಆತ್ಮಜ್ಞಾನಿಯು ಮಾತ್ರ ಸಹಜ ಆನಂದವೆಂದರೆ ಅಮಾನಸಿಕ ಆನಂದ, ಸಾಂಧರ್ಭಿಕ ಮಾತ್ರವಲ್ಲದ ಆನಂದ, ಬದುಕಿನ ಏರಿಳಿತ, ಪ್ರಗತಿ-ಪ್ರಪಾತಗಳಿಗೆ ಏನೂ ಸಂಬಂಧ ಪಡೆದ ಆನಂದ. ಬದುಕಿನ ಸಂದರ್ಭಗಳಿಂದ ಅದು ಸ್ವತಂತ್ರವಾದದ್ದು. ಅಸ್ಥಿರವಾದ, ಮತ್ತೊಂದರ-ಮತ್ತೊಬ್ಬರನ್ನು ಅವಲಂಬಿಸಿದ, ನಾವು ಸಾಮಾನ್ಯವಾಗಿ ಯಾವುದನ್ನು ಸುಖ ಎಂದು ಕರೆಯುತ್ತೇವೋ, ಅದರಿಂದ ಈ ಆನಂದವು ಬೇರೆಯೇ ಆಗಿರುವುದನ್ನು ಯಾರಾದರೂ ಗುರುತಿಸಬಹುದು. ಅಂಥ ಸುಖ ಸಹಜವಾಗಿಯೇ ಅಲ್ಪಪ್ರಮಾಣದ್ದು, ಚಂಚಲವಾದದ್ದು. ಸಹಜ ಆನಂದವು ತನ್ನದೇ ಆದದ್ದು, ಕೊಡಲ್ಪಟ್ಟಿದ್ದಲ್ಲ. ಅಂತರ್ಗತವಾದದ್ದು, ತಾನೇ ಹುಡುಕಿ ಪಡೆಯಬೇಕಾದದ್ದು.

ಈ ಸಹಜ ಆನಂದದ ಅನುಭವಕ್ಕೆ ಆತ್ಮಜ್ಞಾನ ಅಗತ್ಯವಾದುದರಿಂದ, ಆತ್ಮಜ್ಞಾನ ಎಂದರೆ ಏನು? ಎಂಬುದನ್ನು ಅರಿಯುವುದು ಅಗತ್ಯ. ರಮಣರು ಹೇಳಿದಂತೆ, ಅದು ನಾನು ಎಂಬುದರ ನಿಜದನೆಲೆ, ವ್ಯಕ್ತಿತ್ವದ, ವ್ಯಕ್ತಿಯ ನಿಜಾರ್ಥ. ನಮ್ಮೆಲ್ಲ ಅನುಭವಗಳೂ `ನಾನು' ಎಂಬುದರ ಸುತ್ತಲೇ ಕೇಂದ್ರೀಕೃತವಾಗಿದ್ದರೂ ಈ ಪ್ರಶ್ನೆಯತ್ತ ನಾವು ಗಮನವನ್ನೇ ಹರಿಸದಿರುವುದು ನಿಜಕ್ಕೂ ಅಚ್ಚರಿಯೇ! ಎಲ್ಲ ಆಲೋಚನೆಗಳೂ ಯಾವುದರ ಸುತ್ತ ಸುತ್ತುತ್ತವೋ ಆ ನಾನು, ಪ್ರಮುಖ ಸ್ಥಾನವನ್ನು ಪಡೆದಿದೆ. ವೈಯಕ್ತಿಕ ಗಮನ ಅದನ್ನೇ ಉಳಿಸಿ ಬೆಳೆಸುತ್ತದೆ.

ಈ ವಿಷಯವನ್ನು ಚಿಂತಿಸದೆಯೇ `ನಾನು' ಎಂಬ ಈ ಪ್ರಧಾನ ಸಂಗತಿಯತ್ತ ಯಾರೂ ಸಾಕಷ್ಟು ಗಮನ ನೀಡುವುದೇ ಇಲ್ಲ, ನಮ್ಮೆಲ್ಲ ಶಕ್ತಿಗಳೂ ಮನಸ್ಸನ್ನು ಬಹಿರ್ಮುಖಿಗೊಳಿಸುವ ವಸ್ತುಗಳಾಗಿಯೇ ವ್ಯಯವಾಗುತ್ತಿವೆ. ಹೀಗೆ ವಸ್ತು ಕೇಂದ್ರೀಕೃತವಾದ ಮನಸ್ಸಿನಿಂದ, ವ್ಯಕ್ತಿನಿಷ್ಠತೆಯ ಕಡೆಗೆ ಸಂಪೂರ್ಣವಾಗಿ ಹಿಂತಿರುಗಬೇಕಿದೆ.

ನಮ್ಮ ಗಮನಕೇಂದ್ರದಲ್ಲಿ ಒಮ್ಮೆ ಹೀಗೆ ಬದಲಾವಣೆಯಾದರೆ, ನಮ್ಮ ಹಲವಾರು ಭಾವನೆಗಳು, ಭ್ರಮೆಗಳು, ಊಹನೆಗಳು, ಈ ಶೋಧದ ಎದುರು ನಿಲ್ಲಲಾರದೆ ನಶಿಸುತ್ತವೆ.

ಮೊತ್ತ ಮೊದಲು ಗೋಚರವಾಗುವುದು ನಮ್ಮ ದೇಹಾತ್ಮಬುದ್ಧಿ - ಆತ್ಮವನ್ನು ದೇಹದೊಂದಿಗೇ ಗುರುತಿಸಿಕೊಳ್ಳಬಹುದು. ದೇಹವೇ ನಾವು ಎಂದು ಭ್ರಮಿಸಿ ಬಿಡುತ್ತೇವೆ. ಈ ಭ್ರಮೆಯನ್ನು ಆತ್ಮವಿಚಾರವು ಪ್ರಶ್ನಿಸಿ ದೇಹದ ಹಿಡಿತವನ್ನು ಸಡಿಲಿಸಿ, ದೇಹಾತ್ಮಭಾವನೆಯ ಭ್ರಮೆಯನ್ನು ಬಯಲಾಗಿಸುತ್ತದೆ. ಆತ್ಮವಿಚಾರದ ಸಾಧನೆಯಿಂದ ಸ್ವಸ್ವರೂಪದ ಅರಿವು ಸಹಜವಾಗಿಯೇ ಆಗುತ್ತದೆ. ರಮಣರು ಈ ವಿಷಯದ ಮಹತ್ವವನ್ನು ಒತ್ತಿ ಹೇಳುತ್ತಾರೆ, ಏಕೆಂದರೆ `ಸಾವಿನ ಅನುಭವ' ಎಂದು ಕರೆಯಲಾದ ಅವರದೇ ಅನುಭವವು ಈ ಮಿಥ್ಯಾಭಾವನೆಯ ನಿವಾರಣೆಗೆ ನೆರವಾಯಿತು. ಈ ದೇಹಾತ್ಮಬುದ್ಧಿಯೇ ಬ್ರಹ್ಮಾತ್ಮ ಏಕತೆಯ ಅನುಭವವನ್ನು ಮರೆಮಾಡಿದ ಮಾಯೆಯ ಪರದೆ ಎಂಬ ಅರಿವಾಯಿತು. ``ದೇಹವೇ ನಾನು ಎಂಬ ಭಾವನೆಯನ್ನು ಬೇರುಸಹಿತ ಕಿತ್ತೊಗೆಯಬೇಕು. ದುಂಬಿಗಳು ಬಂದು ಸೇರುವ ಮೊದಲೇ ಹೂವು ಅರಳ ಬೇಕಷ್ಟೇ! ದಳಗಳು ಮುಚ್ಚಿಕೊಂಡ ಮೇಲೆ ದುಂಬಿಗಳು ಒಳ ಸೇರುವುದಾದರೂ ಹೇಗೆ? ಹಾಗೆಯೇ ದೇಹಾತ್ಮಬುದ್ಧಿಯನ್ನು ಕಿತ್ತು ಹಾಕದಿದ್ದರೆ, ಆತ್ಮಜ್ಞಾನ ಹೇಗೆ ಸಾಧ್ಯ?''

ಈ ಸಂದರ್ಭದಲ್ಲಿ ರಮಣರು ನಿದ್ರೆಯ ಅನುಭವದತ್ತ ಗಮನ ಸೆಳೆಯುತ್ತಾರೆ. ಎಚ್ಚರದ ಪ್ರಪಂಚದಲ್ಲಿ ಯಾವ ದೇಹದೊಡನೆ ಸಂಬಂಧ ಕಲ್ಪಿಸಿಕೊಂಡಿದ್ದೇವೋ, ಬೇರೊಂದು ವ್ಯಕ್ತಿತ್ವವು ಕನಸಿನಲ್ಲಿ ಇದ್ದಿತೋ, ಅಂಥ ದೇಹದ ಅರಿವು ಈಗ ಇಲ್ಲ. ಎಚ್ಚರದಲ್ಲಿ ನಮಗಿದ್ದ ನಾಮರೂಪಗಳೂ ಇಲ್ಲ. ಈ ಬದಲಾವಣೆಗಳು ನಮ್ಮ ಎಚ್ಚರದ ವ್ಯಕ್ತಿತ್ವ ನಮ್ಮ ನಿಜವಾದ ಸ್ವರೂಪವೇ ಎಂದು ಸಂದೇಹಿಸುವಂತೆ ಮಾಡಲೇಬೇಕು. ಸಂದೇಹದ ಬೀಜಗಳನ್ನು ಒಮ್ಮೆ ಬಿತ್ತಿದರೆ ಸಾಕು. ಪ್ರಥಮ ಅಗತ್ಯದ ಹೆಜ್ಜೆಯನ್ನು ಇರಿಸಿದಂತೆಯೇ ಈ ಪ್ರಶ್ನೆ ಕೇವಲ ಲೋಕಾರೂಢಿಯದಾಗಬಾರದು. ಆಗೊಮ್ಮೆ ಈಗೊಮ್ಮೆ ಎಂಬಂತೆಯೂ ಇರಬಾರದು. ನಮ್ಮ ಶಕ್ತಿಯ ಪ್ರತಿಯೊಂದು ಹನಿಯನ್ನೂ ಸತತವಾದ ಆತ್ಮವಿಚಾರಕ್ಕಾಗಿ ಧಾರೆಯೆರೆಯಬೇಕು. ಹಾಗಿಲ್ಲದಿದ್ದರೆ, "ಕರ್ಮ ಅಥವಾ ಅಕರ್ಮದ ಪ್ರವೃತ್ತಿ ಮೇಲುಗೈಯಾಗಿ ಬಿಡುತ್ತದೆ". ಆದುದರಿಂದ ಧ್ಯಾನದ ಮೂಲಕ ಸಮಚಿತ್ತವನ್ನು ಹೊಂದುವ ಅಗತ್ಯ. ಅಂಥ ಚಿತ್ತದಲ್ಲಿ ಅಪೂರ್ವ ಆನಂದದ ಅನುಭವವಾಗುತ್ತದೆ. ``ನಿಮ್ಮ ಮುಂದಿನ ಉಸಿರೇ ಕಡೆಯುಸಿರು ಆಗಬಹುದು ಎಂದು ನೆನಪಿಡಿ. ಆತ್ಮ ವಿಚಾರದತ್ತ ಸಮಸ್ತ ಗಮನವನ್ನು ಕೇಂದ್ರೀಕರಿಸಿ''ಎಂದು ರಮಣರೆನ್ನುವಾಗ, ನಮ್ಮ ಸಮಸ್ತ ಪ್ರಯತ್ನದ ಪೂರ್ಣ ಮಗ್ನತೆಯನ್ನೇ ಒತ್ತಿ ಹೇಳುತ್ತಿದ್ದಾರೆ. ಅಂಥ ನಿರಂತರ ಶೋಧದಿಂದ ದೊರೆಯುವ ಅಪೂರ್ವವಾದ ಲಾಭವನ್ನು ಮನಸ್ಸು ನಿಜಕ್ಕೂ ಗ್ರಹಿಸಲೇ ಆರದು. ನಿರ್ದಿಷ್ಟ ವ್ಯಕ್ತಿತ್ವ ಅಳಿದ ಮೇಲೆಯೇ ಪರಿಪೂರ್ಣ ಪ್ರಜ್ಞೆಯಾದ ನಮ್ಮ ಸ್ವಸ್ವರೂಪಾನುಭವ ಸಾಧ್ಯ. ಆಗ ನೈಜವಾದ ಆನಂದದ

(ಪುಟ 14ಕ್ಕೆ)

# VOCATIONAL COURSES MAKE CAREERS

- Arjun B.

Vocational courses are a thing of the recent past, thriving in the present and bound to help more students make their careers in the future. Vocational courses have not always been so popular as they have been since the past ten to fifteen years or so.

Even in the not so distant past, vocational courses offering new careers in unemployed fields were frowned upon the more accepted and time proven professional fields like Medicine & Engg. were preferred. Not that other professions did not exist. They were there to a smaller extent but there were no organised courses to train people in fields like Chem. Engg. or a Company Secretary or in Pharmacy.

One generation ago the Professional Courses available were:

| ENGG. | MEDICAL | LEGAL | ACCOUNTS | PARA MEDICAL |
|---|---|---|---|---|
| CIVIL<br>MECH.<br>ELEC. | Medicine<br>Veterinary<br>Dentistry | Law | C.A. | Nursing |

Now, the whole scenario is different. Growth in the knowledge & technology has led to various areas of specialisation. This has in turn evolved into various courses of specialised studies.

TODAY'S SCENARIO

| ENGG. | MEDICINE | PARA MEDICAL | LAW | ACCOUNTS |
|---|---|---|---|---|
| CIVIL | Medicine with | Nursing | Post-Graduate | C.A. |
| MECH. | specialisation | Pharmacy & specialised | ICWA | |
| ELEC. | in Pathology | Courses | ICFAI | |
| ELECTRONICS | Surgery | Physiotherapy | | CBF |
| TELECOM | Child Health | Occupational | | |
| CHEMICAL | Obstetrics | Therapy | | |
| BIOMEDICAL | Gynaecology | Hospital Pharmacy | | |
| INSTRUMENTATION | Mental Health | | | |
| | Orthopaedics | | | |
| | Int. Medicine | | | |
| | Pathology | | | |
| | Dentistry | | | |
| | Gen. Dentistry | | | |
| | Orthodontics | | | |
| | Veterinary | | | |

An APTITUDE TEST helps in selecting a course which is best suited for the candidate. People are now realising the scope and prospects offered by these new fields and more and more students are flocking to join the institutions offering these courses, thereby opting for careers in vocational fields hitherto left only to the trend setters and people willing to try out a new field at their own risk.

But, now as the popularity of the vocational courses increase, more institutions are coming forth with courses in all kinds of fields such as Business Management, Hotel Management, Diploma in Computers, Technical Know-how etc.

Now, let us see some of the different vocational courses available to us:-

**1) MBA/MMS BUSINESS MANAGEMENT:-**

A degree in Business Management is very effective now-a-days because most of the companies are becoming aware of the need of an organisation which has personnel who are experts in managing organisation. A Post-Graduate MBA degree takes 2 years to complete if it is - full time course and 3 years for a part-time course. At the end of the 2 year course, campus interviews are conducted. But such is not the case with the part-time course as the students are already working.

**Institutes offering MBA:-**

Indian Institute of Management is a very prestigious institution which offers an MBA Post-Graduate course. Bajaj Institute of Management is also another prestigious institute offering MBA. Somaiya & Narsee Monjee are institutions offering MBA Courses in Bombay. These are only some of the institutes offering MBA. To secure admissions into these institutions, the candidate has to take an Entrance Test (different entrance tests for different institutions). After the entrance test, there is a Group Discussion (GD). The candidates are short listed and then selected after an interview.

**MMS:-** MMS is a course similar to MBA degree. It is offered by the Government. It is a centralised course and one has to take the entrance exam at the centre of specified by the Govt. of Maharashtra. MMS is not so known in business circles as is MBA, but is said to be equally effective.

**2) CA/ICWA/ICFAI:-** For graduates in B.Com., these are some of the professional fields open to them.

**A) CA:-** It generally takes four years to become full-fledged Chartered Accountant (CA). There is a foundation course which can be given before graduation. After the foundation course is cleared, the candidate can start his articleship even if he has not finished his graduation. Or else, the candidate has to finish his graduation to start his articleship. And, a candidate having more than 60% marks in his final year B.Com., need not give the Entrance Test to start his articleship. One who has not must take the test through. This articleship is of 14 months at the end of which one has to take the C.A. INTER exam. A period of 6 months is given for the INTER preparation. Once, the INTER is cleared, the candidate has to wait for a year and half before he can take the CA final exam. Once, he clears the CA finals, he acquires the title of CA. All these exams are held under the Institute of Chartered Accountants of India, whose office in Mumbai is located at Cuffe Parade.

**B) ICWA** - Institute of Cost & Works Accountants:- Is a two-year post-graduate course. To qualify for this course, one has to clear the entrance exam held by the ICWA.

**C) ICFAI** - This has to do with cost and financial accounting and in also a two-year full time post-graduation course.

**3) MCA:-** - Master in Computer Applications:-

This is a post-graduate course equivalent to a degree in computer engineering. The duration of this course is 3 years. Anyone, who has opted for Maths at H.S.C. level can enroll for this course. But, this course proves more useful for students with a Science

background than for students from Commerce or Arts because the nature of work is more technical. That, is my opinion. MCA is offered by the Bombay, Madras, Bangalore Universities and by many other autonomous universities. MCA is now in great demand as the use of computers is on the increase and therefore, the need for computer professionals is on the rise. There is also vast scope for climbing to the top at the corporate level. The MCA degree is just as useful as an Engg. Degree or any other post-graduate degree to get into a good job and ensure a successful career.

**4) Diploma in Computer Applications:-**

Diploma in Computer Applications is offered by many private institutions like APTECH, NIIT, BITS, DATAPRO etc. These courses are very much in demand now-a-days as they mean an extra qualification in addition to a degree and that means an extra edge in today's competitive world. The main advantage of these courses is that they can be done simultaneously with one's degree. This helps in acquiring an extra qualification by the time one finishes one's graduation, thereby saving precious years in post-graduate study. For those who do not want a comprehensive diploma, there are short-term courses of lesser time durations offering specific applications of the computer. A few examples are EDIT COMPUTER INSTITUTE offers a course in Computer Graphics, Visual Basic etc. These courses are useful for the artistically inclined and for those who want to make a career in the field of Advertising or in the Film/TV World. There are courses offering SYBASE, UNIX, C++ for candidates who want only specific applications to suit their purposes.

Since the computer world is ever changing and fast growing, what is popular today may not be popular tomorrow. As a result, a popular application today might become obsolete the next day as a result of some new software development. Hence, these short-term courses are very popular among professionals and others who want to update themselves.

In general, the computer world has a lot of post-graduate/non post-graduate courses to suit everyone's aptitude. And, there is no dearth for jobs in this field, thanks to technology and progress and there won't be for many years to come.

**B.Sc. in Economics:-** This is Bachelor of Science Degree in Economics conducted by the London School of Economics. The South Indian Education Society (S.I.E.S.), Bombay has opened a new college in Nerul, New Bombay especially offering this post-graduate degree alongwith other post-graduate degrees. This new college is affiliated to the University of London. Therefore, students passing out of this college acquire a degree straight from the London School of Economics while studying in India. This college in Nerul, comes under the S.I.E.S. Institute of Management Studies. This course is suitable for students with a B.Com., background or B.A. graduates with specialisation in Economics.

**6) Other Courses:-** There are plenty of offer courses for specialisation to suit everyone's needs.

**Some of them are:-**

A) Hotel Management/Catering
B) Travel & Tourism - offered by I.A.T.A. etc.
C) Export Management
D) Company Secretary

and much more.

**7) National School of Drama:-** Situated at Pune, Maharashtra is well-known for the quality of artistes it produces. Some of the well-known personalities in films and theatre are products of this Institute. Hence, for the artistically inclined, the NSD offers great scope for loving and developing one's talents. It offers various courses right from the backstage activities to technical jobs to actual acting and drama. So, one can call NSD a stepping stone to candidates aspiring to make an impact on the drama and film world.

Given above are only some of the vocational courses being offered in today's competitive world. The given information is true to the best of my knowledge. And I hope the article proves beneficial to all those who read it.

ಕವನ :

## ಕವಿಯ ಕಾವ್ಯ

ಕವಿ ಮುನಿದರೆ
ಕಾವ್ಯ ಕದನವಾಗುವುದು.
ಭೂತ ವರ್ತಮಾನ ಜೀವ - ಜನ್ಮ
ಗಳ ಸ್ಮೃತಿಪಟಲ ಕದಡಿ
ಕೆನ್ನಾಲಗೆ ಚಾಚಿ ಉಗುಳುಗುಳಿ
ಉರಜ್ವಾಲೆಗಳನು ಕಾವ್ಯ
ಜ್ವಾಲಾಮುಖಿಯಾಗುವುದು.
ಭೂಮಾತೆ ಬಂಜೆಯಲ್ಲ, ಅವಳು
ಹಡೆದವಳು ನಮ್ಮ ನಿಮ್ಮ ಹಡೆಯುವವಳು
ಕಾವ್ಯದ ಕಣಜ ಬರಿದಾಗದು
ಕವಿಯೆಂದೂ ಸಾಯಲಾರ
ಯಾಕೆ ಶ್ರದ್ಧಾಂಜಲಿಯ ಸನ್ಮಾನ
ಕಾವ್ಯ ಮೃತ್ಯುಂಜಯವಾಗುವುದು.
ವ್ಯವಸ್ಥೆಯ ಹುತ್ತದೊಳಗೆ ಸರ್ಪ
ಸಮಸ್ಯೆಗಳು
ಭವಿಷ್ಯದ ಗರ್ಭದೊಳಗೆ ವಿಷ
ಜಂತುಗಳು
ಇದ್ದವರೆ ಸತ್ತು, ಸಾಯುವವರೆ ಇದ್ದು
ಸಾವೇ ಸತ್ಯವಾಗಿ ಸಾಯಲು ಬಿಡದಾಗ
ಕಾವ್ಯ ವೇದಾಂತವಾಗುವುದು.
ಕವಿಯೆನ್ನಬೇಡಿ ಅವನನ್ನು
ಕನಿಕರದ ಕೊಳ್ಳಿಯಿಂದ ತಿವಿಯಬೇಡಿ
ಬಿಸಿಲು ತುಳಿಯುವ ಹಾದಿ ನೆರಳೂ
ಜೊತೆಗಿಲ್ಲ
ಸತ್ಯ ಸ್ವಾಮಿ; ನೂರ್ಕಾಲ ಸತ್ಯ
ಕವಿ ನೊಂದರೆ
ಕಾವ್ಯ ಮೌನವಾಗುವುದು.

— ಗೋಪಾಲ ತ್ರಾಸಿ

## 'ಜ್ಞಾನ ಪೀಠ' ಪ್ರಶಸ್ತಿ ವಿಜೇತ ಕನ್ನಡಿಗರು 6

# ಅನಂತಮೂರ್ತಿಯವರ ಕಥಾ ಸಾಹಿತ್ಯ ಮತ್ತು ಸಂಸ್ಕೃತಿ ವಿಘಟನೆ

• ಕೆ. ರಘುನಾಥ

ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ, ಸಂಸ್ಕೃತಿಯ ವಿಘಟನೆಯ ಸ್ವರೂಪವನ್ನು ಕುರಿತ ಈ ಪ್ರಬಂಧದಲ್ಲಿ ಮೂರು ಭಾಗಗಳಿವೆ. ಮೊದಲನೆಯದು ಸಂಸ್ಕೃತಿಯ ಸ್ವರೂಪದ ಬಗೆಗಿನ ವಿವೇಚನೆ. ಎರಡನೆ ಭಾಗದಲ್ಲಿ ಅದರ ವಿಭಿನ್ನ ಸ್ವರೂಪಗಳು ಅವರ ಕಥೆಗಳಲ್ಲಿ ಪ್ರಕಟಗೊಳ್ಳುವ ಬಗೆ. ಮೂರನೆ ಭಾಗದಲ್ಲಿ ಅವರ ಸಂಸ್ಕೃತಿಯ ಪರಿಕಲ್ಪನೆಯ ಸಾಧನೆ ಮತ್ತು ಮಿತಿಗಳ ಸಮೀಕ್ಷೆ ಇದೆ.

೧

'ಸಂಸ್ಕೃತಿ' ಎನ್ನುವ ಶಬ್ದಕ್ಕೆ ಮಾಡಲ್ಪಟ್ಟದ್ದು, ಕೃತಕವಾದುದು, ಅನೈಜವಾದುದು ಎಂಬ ಅರ್ಥಗಳಿವೆ. ಅದಕ್ಕೆ ವಿರುದ್ಧವಾಗಿ ನೈಜವಾದುದು, ನೈಸರ್ಗಿಕವಾದುದು, ಇರುವುದು ಎಂಬ ಅರ್ಥವನ್ನು ಹೊಂದಿರುವ 'ಪ್ರಕೃತಿ' ಎಂಬ ಪರಿಕಲ್ಪನೆ ಇದೆ. ಸಂಸ್ಕೃತಿ ಎನ್ನುವುದು 'ವ್ಯಕ್ತಿಯ ಅಂತರಂಗದ ಪರಿಪಾಕ' ಎನ್ನುವುದರಿಂದ ಹಿಡಿದು 'ಅದೊಂದು ಜೀವನ ವಿಧಾನ' ಎನ್ನುವ ವಿಶಾಲವಾದ ಅರ್ಥ ವ್ಯಾಪ್ತಿಯನ್ನು ಒಳಗೊಂಡಿದೆ. ಒಟ್ಟಿನಲ್ಲಿ ಅದನ್ನು ಮನುಷ್ಯರಿಗೆ ಸಂಬಂಧಿಸಿದ್ದು, ಸಾಪೇಕ್ಷವಾದುದು. ನಿರಂತರ ಚಲನಶೀಲವಾದ ಪ್ರಕ್ರಿಯೆ ಎಂದು ಗ್ರಹಿಸಬಹುದು.

ಅನಂತಮೂರ್ತಿಯವರ ಕಥೆಗಳಲ್ಲಿನ ಸಂಸ್ಕೃತಿಯ ಸ್ವರೂಪಕ್ಕೆ ಬರುವ ಮುನ್ನ ಅವರು ಬೆಳೆದು ಬಂದ ಹಿನ್ನೆಲೆಯನ್ನು ಗಮನಿಸುವುದು ಅಗತ್ಯ. ಉಡುಪಿಯ ರಾಜಗೋಪಾಲಾಚಾರ್ಯ ಅವರ ತಂದೆ. ಅವರ ಹೆಸರೇ ಸೂಚಿಸುವಂತೆ ಅವರು ಉಡುಪಿಗೆ ಸೇರಿದವರಾದರೂ ಬೆಳೆದದ್ದು ಶಿವಮೊಗ್ಗ ಜಿಲ್ಲೆಯ ಮೇಳಿಗೆ ಎನ್ನುವ ಅಗ್ರಹಾರದಲ್ಲಿ. ಜೀವನೋಪಾಯಕ್ಕಾಗಿ ಮಠದ ಏಜೆಂಟರಾಗಿದ್ದರೂ, ಅವರು ಅಂದಿನ ರಾಜಕೀಯ, ಸಾಮಾಜಿಕ ಆಂದೋಲನಗಳಿಗೆ ತಮ್ಮನ್ನು ತೆರೆದು ಕೊಂಡಿದ್ದರು. ಇಂಥ ಸನ್ನಿವೇಶದಲ್ಲಿ ಹುಟ್ಟಿಕೊಂಡ ಇಬ್ಬಂದಿತನ - ತಂದೆಯಿಂದ ಮಗನಿಗೆ ಬಂದ ಬಳುವಳಿ. ಆದ್ದರಿಂದಲೇ ಅವರಿಗೆ ಮೊದಲಿನಿಂದಲೂ ತಾವು ಬೆಳೆದ ವಾತಾವರಣದ ಅಮಾನುಷ ಅಂಶಗಳು, ಅದರ ವೈರುಧ್ಯಗಳು ತೀವ್ರವಾಗಿ ತಟ್ಟಿ ಜಿಜ್ಞಾಸೆಗೆ ಬಳಗು ಮಾಡಿರಬೇಕು. ಇದಕ್ಕೆ ಅವರ ನೆರವಿಗೆ ಬಂದದ್ದು ಅವರು ಪಡೆದುಕೊಂಡ ಪಾಶ್ಚಾತ್ಯ ಶಿಕ್ಷಣ. ಅದು ಅವರನ್ನು ಆತ್ಮ ವಿಮರ್ಶೆ ಮಾಡಿಕೊಳ್ಳುವಂತೆ ಪ್ರೇರೇಪಿಸಿತು.

ಈ ಹಿನ್ನೆಲೆಯಲ್ಲಿ ಅವರು ಮೊದಲು ಬರೆದ ಕಥೆಗಳು, ವಿಮರ್ಶಾ ಸಂಕಲನಗಳು ಅವರ ಸಂಸ್ಕೃತಿಯ ಪರಿಕಲ್ಪನೆಯನ್ನು ನಮ್ಮ ಮುಂದಿರಿಸುತ್ತವೆ. ಅದನ್ನು ಸ್ಥೂಲವಾಗಿ ಹೀಗೆ ಗ್ರಹಿಸಬಹುದು. ಬ್ರಾಹ್ಮಣ ಸಂಸ್ಕೃತಿ ಎನ್ನುವುದು ತನ್ನ ಆತ್ಮರತಿ ಸ್ವಭಾವದಿಂದ ಜಡವಾಗಿ ಗೂಡು ಕಟ್ಟಿಕೊಂಡಿದೆ. ಅದರಿಂದಾಗಿ ತನ್ನ ಕ್ರಿಯಾಶೀಲತೆಯನ್ನು ಕಳೆದು ಕೊಂಡಿದೆ. ಬಹುಸಂಖ್ಯಾತ ಶ್ರಮಿಕ ಜನಾಂಗವನ್ನು ದೂರವಿಟ್ಟು ತನ್ನ ಒಡಲಿನಲ್ಲಿ ಅರ್ಬುದ ರೋಗವನ್ನು ಬೆಳೆಸಿಕೊಂಡಿದೆ.



> "ನಾನು ಒಳಗಿನ ವಿಮರ್ಶಕ. ನಮ್ಮ ಸಂಸ್ಕೃತಿಯಲ್ಲೇ ನಿಂತು ನೋಡೋದು. ಒಳಹಟ್ಟು ನೋಡೋದು. ಆದರೆ ಅನುಮಾನ ಇಟ್ಕೊಂಡೂ ನೋಡೋದು ನನಗೆ ಮುಖ್ಯ ಅನ್ನಿಸುತ್ತೆ. ನಮ್ಮ ಪರಂಪರೆ ಕಾಲಕಾಲಕ್ಕೆ ಬೆಳೆದುಕೊಂಡು ಬಂದಿರೋ ಕ್ರಮ ಕೂಡಾ ಹಾಗೇ ಇದೆ. ವೇದಗಳ ಪರಂಪರೆ ಬಂತು. ಬುದ್ಧ ಅದನ್ನ ಪ್ರಶ್ನಿಸಿದ. ಸಂತರು ಅದನ್ನು ಪ್ರಶ್ನಿಸಿದರು. ನಾನೂ ಆ ಪರಂಪರೆಯಲ್ಲಿ ಇದ್ದೇನೆ. ಸಾಹಿತ್ಯದಲ್ಲೂ ಅಷ್ಟೆ. ಬಸವಣ್ಣ, ದಾಸರು, ಕುಮಾರವ್ಯಾಸ, ನವೋದಯ ಲೇಖಕರು, ನವ್ಯರು - ಕಾಲಕಾಲಕ್ಕೆ ಪರಂಪರೆಯನ್ನು ಪ್ರಶ್ನಿಸಿಯೇ ಅದನ್ನು ಬೆಳೆಸಿಕೊಂಡು ಹೋಗಿದ್ದಾರೆ."
>
> "ನನ್ನ ದೃಷ್ಟೀಲಿ ಹೆಚ್ಚು ಪರಿಪೂರ್ಣ ಸಾಕ್ಷಾತ್ಕಾರ ಸಾಹಿತ್ಯದಲ್ಲಿ ಸಿದ್ಧಿಸುತ್ತೆ. ಯಾಕೇ ಅಂದ್ರೆ ಸಾಹಿತ್ಯದಲ್ಲಿ ಪ್ರಾಕ್ಟಿಕಲ್ ಆದದ್ದು ಮಾತ್ರ ಸತ್ಯ ಅಲ್ಲ. ಮನುಷ್ಯಗೆ ಭಾವನೆಗೆ ನಿಲುಕುವುದೆಲ್ಲವೂ ಸಾಹಿತ್ಯದಲ್ಲಿ ಸತ್ಯವೆ."
>
> *(ಸುಧಾ, 1 ಜನವರಿ 95 ರಿಂದ ಸಂಗ್ರಹಿಸಿದ್ದು)*

ಇದಕ್ಕೆ ಕಾಯಕಲ್ಪವೆಂದರೆ ಅದು ಶೂದ್ರ ಸಂಸ್ಕೃತಿಯ ಸಂಪರ್ಕದಿಂದ ಮಾತ್ರ. ಆದರೆ ಅದು ಸಂಭವಿಸಲು ಇರುವ ಅಡ್ಡಿ ಆತಂಕಗಳನ್ನು ಅವರು ನಾಲ್ಕು ಬಗೆಯಲ್ಲಿ ಗ್ರಹಿಸುತ್ತಾರೆ. ಅವುಗಳನ್ನು ನಮ್ಮ ಅಭ್ಯಾಸದ ಅನುಕೂಲಕ್ಕೆಂದು ಹೀಗೆ ಗುರುತಿಸಬಹುದು.

1. ಬ್ರಾಹ್ಮಣ ಶೂದ್ರರ ಸಂಬಂಧ.
2. ಬ್ರಾಹ್ಮಣರಲ್ಲಿ ಗಂಡು-ಹೆಂಡಿನ ಸಂಬಂಧ.
3. ಬ್ರಾಹ್ಮಣರ ದಾಂಪತ್ಯದ ಪರಿಕಲ್ಪನೆ.
4. ಬ್ರಾಹ್ಮಣ್ಯದ ವಿಧ್ಯುಕ್ತ ಕ್ರಿಯೆಗಳು.

ಇವುಗಳನ್ನು ಅವರ ಕಥೆ ಮತ್ತು ಕಾದಂಬರಿಗಳಲ್ಲಿ ಕಂಡು ಬರುವ ಸ್ವರೂಪದ ಮೇಲೆ ಮಾಡಿಕೊಂಡಿರುವುದರಿಂದ ಇಲ್ಲಿ ಕಥಾ ಸಾಹಿತ್ಯ ಎನ್ನುವುದು ಎರಡನ್ನೂ ಒಳಗೊಂಡಿದೆ.

೨

ಈಗ ಮೇಲೆ ಮಾಡಿಕೊಂಡ ನಾಲ್ಕು ಭಾಗಗಳನ್ನು ಒಂದೊಂದಾಗಿ ನೋಡಬಹುದು.

**೧. ಬ್ರಾಹ್ಮಣ ಮತ್ತು ಶೂದ್ರ ಸಂಬಂಧ**

ಅನಂತಮೂರ್ತಿಯವರ ಕಾದಂಬರಿಗಳಲ್ಲಿ ಇದಕ್ಕೆ ಅವಕಾಶ ದೊರೆತಿರುವುದರಿಂದ ಅದರಲ್ಲೂ ಮುಖ್ಯವಾಗಿ ಮೊದಲ ಎರಡು ಕಾದಂಬರಿಗಳಾದ 'ಸಂಸ್ಕಾರ' ಮತ್ತು 'ಭಾರತೀಪುರ'ಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಭಾರತೀಯ ವರ್ಣ ವ್ಯವಸ್ಥೆಯ ಎರಡು ತುದಿಗಳೆಂದರೆ ಬ್ರಾಹ್ಮಣ ಮತ್ತು ಶೂದ್ರರು. ಬ್ರಾಹ್ಮಣ ತನಗಿರುವ ಬೌದ್ಧಿಕ ಪರಂಪರೆಯ ಬೆನ್ನೆಲುಬಿನಿಂದಾಗಿ ತನ್ನ ಹೊಟ್ಟೆಯನ್ನು ತನ್ನ ದುಡಿಮೆಯಿಂದ ತುಂಬಿಸುತ್ತ ಬಂದಿರುವ ಶೂದ್ರರನ್ನು ಕೀಳೆಂದು ಪರಿಗಣಿಸುತ್ತ ಅವರನ್ನು ಸಂಸರ್ಗದಿಂದ ದೂರವಾಗಿಯೇ ಇಟ್ಟಿದೆ. ವೇದಾಧ್ಯಯನ, ಜಪ-ತಪ-ಅನುಷ್ಠಾನಗಳನ್ನು ಆದರ್ಶವೆಂದು ಭಾವಿಸಿದ ಪ್ರತೀಕವೋ ಎನ್ನುವಂತೆ 'ಸಂಸ್ಕಾರ'ದ ಪ್ರಾಣೇಶಾಚಾರ್ಯ ಬರುತ್ತಾನೆ.

ಆದರೆ ಅವನಿಗೆ ಸವಾಲಾಗಿ ಬರುವ ನಾರಣಪ್ಪ ಅದಕ್ಕೆ ತದ್ವಿರುದ್ಧವಾದ ಜೀವನ ನಡೆಸುತ್ತಾನೆ. ರೋಗಿಷ್ಠೆಯಾದ ಹೆಂಡತಿಯನ್ನು ತನ್ನ ಸಾಧನೆಗೆ ಊರುಗೋಲೆಂದು ಭಾವಿಸಿ ಅವಳ ಜೊತೆಗೆ ಯಾಂತ್ರಿಕ ಜೀವನ ನಡೆಸುವ ಪ್ರಾಣೇಶಾಚಾರ್ಯ ಒಂದು

ಕಡೆಗಿದ್ದರೆ. ಕಟ್ಟಿಕೊಂಡ ಬ್ರಾಹ್ಮಣ ಹೆಂಡತಿಯನ್ನು ಬಿಟ್ಟು, ಸೂಳೆ ಚಂದ್ರಿಯನ್ನು ಇಟ್ಟುಕೊಂಡು ಹೆಂಡ ಕುಡಿಯುತ್ತಾ, ತನಗೆ ಬಹಿಷ್ಕಾರ ಹಾಕಿದರೆ ಮುಸ್ಲಿಂ ಆಗಿ ಬಿಡುತ್ತೇನೆ ಎಂದು ಹೆದರಿಸುವ ನಾರಣಪ್ಪ ಇನ್ನೊಂದು ತುದಿ. ಶಕುಂತೋಲೋಪಾಖ್ಯಾನವನ್ನು ಶೃಂಗಾರಮಯವಾಗಿ ವರ್ಣಿಸಿ ಯುವಕರನ್ನು ಉದ್ರೇಕಿಸುತ್ತಿದ್ದ ಪ್ರಾಣೇಶಾಚಾರ್ಯ ತನ್ನ ನೈಸರ್ಗಿಕ ಕಾಮವನ್ನು ಅಪರೋಕ್ಷವಾಗಿ ತೀರಿಸಿಕೊಳ್ಳುವ ಪ್ರಾಣೇಶಾಚಾರ್ಯರ ಬದುಕು ಆಷಾಢಭೂತಿತನದಿಂದ ಕೂಡಿದ್ದು. ಶೂದ್ರನಂತೆ ಬದುಕುವ, ತನ್ನ ಬದುಕಿನಿಂದ ಊರಿನ ಯುವಕರನ್ನು ಸೆಳೆದು ಕೊಳ್ಳುವ ನಾರಣಪ್ಪ ಅವನಿಗೊಂದು ಸವಾಲು ಬದುಕಿದ್ದಾಗ. ಅವನು ಸತ್ತು ಸವಾಲಾಗುವುದು ಅವನ ಸಂಸ್ಕಾರವನ್ನು ಮಾಡಬೇಕೇ ಬೇಡವೇ ಎಂಬ ತೊಡಕಿನಲ್ಲಿ ಸಿಕ್ಕಿಸಿದಾಗ ಬ್ರಾಹ್ಮಣನಾಗಿ ಹುಟ್ಟಿದರೂ ಬ್ರಾಹ್ಮಣನಂತೆ ಬದುಕದೆ ಸತ್ತ ಅವನಿಗೆ ಸಂಸ್ಕಾರ ಮಾಡಬೇಕೇ ಬೇಡವೇ ಎಂಬುದೇ ದೊಡ್ಡ ಸಮಸ್ಯೆಯಾದಾಗ ಅದಕ್ಕೆ ಅವರು ಉತ್ತರ ಹುಡುಕುವುದು ಧರ್ಮಶಾಸ್ತ್ರಗಳಲ್ಲಿ. ಗುಡಿಯ ಮಾರುತಿಯಲ್ಲಿ. ಅದಕ್ಕೆ ಉತ್ತರ ಇದೆಯೆಂದು ಈಚಿನವರು ಸಿದ್ಧ ಮಾಡಿರುವುದು ನಿಜವಾದರೂ ನಮಗೆ ಮುಖ್ಯವಾದುದು ಜೀವಂತ ಸಂದರ್ಭಗಳಲ್ಲಿ ಉತ್ತರ ಹುಡುಕದೆ ಧರ್ಮಶಾಸ್ತ್ರಗಳಲ್ಲಿ ಉತ್ತರ ಕಾಣಿಸಲೆಳಸುವ ಬ್ರಾಹ್ಮಣ್ಯದ ಅಮಾನುಷ ಸ್ವರೂಪಕ್ಕೆ. ಇದಕ್ಕೆ ಬದಲಾಗಿ ಚಂದ್ರಿ (ಕೆಳ ಜಾತಿಯ) ವರ್ತಿಸುವುದನ್ನು ನೋಡಿ ಅವಳು ನಾರಣಪ್ಪ ಇರುವವರೆಗೆ ಅವನಿಗೆ ನಿಷ್ಠಾವಂತಳಿದ್ದು, ಅವನು ಸತ್ತ ಮೇಲೆ ಅವನ ಆಭರಣಗಳನ್ನು ಸಂಸ್ಕಾರದ ಖರ್ಚಿಗೆಂದು ತಂದು ಕೊಟ್ಟರೆ ಮೊದಲು ಅವನ ಸಂಸ್ಕಾರ ಮಾಡಲು ಹಿಂಜರಿದ ಇದೇ ಬ್ರಾಹ್ಮಣರು ನಾಲಿಗೆಯಲ್ಲಿ ಜೊಲ್ಲು ಸುರಿಸುತ್ತಾರೆ. ಇಲ್ಲದ ಸಂಬಂಧಗಳನ್ನು ಸೃಷ್ಟಿಸಿಕೊಂಡು, ಅದಕ್ಕಾಗಿ ಕೋರ್ಟಿನ ಕಟ್ಟೆಯನ್ನು ಹತ್ತಲು ಸಿದ್ಧರಾಗುವ ಅಗ್ರಹಾರದ ಬ್ರಾಹ್ಮಣರು, ಬ್ರಾಹ್ಮಣರ ಸಂಸ್ಕೃತಿಯ ವಿಘಟನೆಯ ಪ್ರತೀಕಗಳಾಗಿದ್ದಾರೆ. ಚಂದ್ರಿ ಬೇರೆ ದಾರಿ ಕಾಣದೆ ನಾರಣಪ್ಪನ ಶವವನ್ನು ಮುಸ್ಲಿಂರ ಸಹಕಾರದಿಂದ ಸುಡಿಸಿ ತನ್ನ ದಾರಿ ಹಿಡಿದು ಹೋಗುತ್ತಾಳೆ.

ಈ ನಡುವೆ ಮಾರುತಿಯಿಂದ ತಮ್ಮ ಪ್ರಶ್ನೆಗೆ ಉತ್ತರ ಪಡೆಯದ ಪ್ರಾಣೇಶಾಚಾರ್ಯರು ಬಸವಳಿದು ಬರುತ್ತಾ ಬೀಳುವಂತಾದಾಗ ಅವರನ್ನು ಚಂದ್ರಿ ಹಿಡಿದು ಕೊಳ್ಳುತ್ತಾಳೆ. ಅವರಿಗೆ ಅರಿವಿಲ್ಲದಂತೆ ಅವರ ಸಮಾಗಮವಾಗಿ ಬಿಡುತ್ತದೆ. ವೇದಾಂತ ಶಿರೋಮಣಿ ಪ್ರಾಣೇಶಾಚಾರ್ಯರ ವ್ಯಕ್ತಿತ್ವಗಳ ಹೊಸ ಆಯಾಮವನ್ನು ಕೊಡುತ್ತದೆ. ತಾನು ಇಲ್ಲಿಯವರೆಗೆ ಬದುಕಿದ್ದು ಅನೈಸರ್ಗಿಕ ಎನ್ನುವ ಪರಿವೆ ಮೂಡಿ ಹೆಂಡತಿ ಸತ್ತ ಕೂಡಲೇ ತಾನು ಕಾಲು ಹೋದಲ್ಲಿ ನಡೆದು ಬಿಡುವುದಾಗಿ, ತಾನು ನಾರಣಪ್ಪನ ಶವ ಸಂಸ್ಕಾರದ ಪ್ರಶ್ನೆಯನ್ನು ಬಿಡಿಸಲು ಅನರ್ಹನೆಂದು ಭಾವಿಸಿ ಹೊರಟು ಬಿಡುತ್ತಾರೆ. ಆದರೆ ಹೀಗೆ ಹೊರಟಾಗ ಅವರ ಜೊತೆಗಾರನಾಗುವವನು ಮಾಲೇರಪುಟ್ಟ. ಅವರು ಇದುವರೆಗೆ ಕಾಣದ ವಸ್ತು ಪ್ರಪಂಚವನ್ನು ಅದರ ಜೀವಂತಿಕೆಯನ್ನು ಪ್ರಾಣೇಶಾಚಾರ್ಯರಿಗೆ ತೋರಿಸಿ ಕೊಡುತ್ತಾನೆ. ಆದರೆ ಅವರಿಗೆ ತನ್ನ ಪೂರ್ವ ಜೀವನದ ಅಸ್ತಿತ್ವ ಕಾಡಿಯೇ ಕಾಡುತ್ತದೆ. ಯಾರಾದರೂ ತನ್ನನು ಗುರುತಿಸಿ ಬಿಟ್ಟರೆ ಎಂಬ ಅಳುಕು ಎಲ್ಲಿಯೂ ಅವರನ್ನು ನಿಲ್ಲದಂತೆ ಮಾಡುತ್ತದೆ. ಮಾಲೇರಪುಟ್ಟ ತೋರಿಸಿದ ಪದ್ಮಾವತಿಯ ಮೇಲೆ ಅವರಿಗೆ ಆಸೆಯಾದರೂ ಅವರು ಅಗ್ರಹಾರಕ್ಕೆ ತಾನು ಕಳೆದುಕೊಂಡ ಅರ್ಹತೆಯಿಂದಾಗಿ, ತನ್ನಂತೆಯೇ ಇದ್ದು ಬಿಡುವ ತಿಳಿಸುವ ಉದ್ದೇಶದಲ್ಲಿ ಮರಳುತ್ತಾರೆ.

ಇಲ್ಲಿ ಬರುವ ಬೆಳ್ಳಿ, ಚಂದ್ರಿ, ಪದ್ಮಾವತಿಯರು ಹೊಲತಿಯರ ಪ್ರತೀಕಗಳಾಗಿ ಕಂಡು ಬಂದು, ಬ್ರಾಹ್ಮಣರ ಭೋಗಕ್ಕೆ ಸೃಷ್ಟಿಸಿದಂತೆ ಅವರ ವರ್ಣನೆಗಳ ಮೂಲಕ ಗ್ರಹಿಸಬಹುದಾಗಿದೆ. ಶೂದ್ರತ್ವ ಆವಾಹಿಸಿಕೊಂಡ ನಾರಣಪ್ಪ ಮತ್ತು ಮಾಲೇರಪುಟ್ಟ ಆ ಬದುಕಿನ ಜೀವಂತಿಕೆಯ ನೈಸರ್ಗಿಕತೆಯ ನಿದರ್ಶನಗಳಾಗಿದ್ದಾರೆ. ಅವರ ವ್ಯಕ್ತಿತ್ವದ ಕ್ರಿಯಾಶೀಲತೆಯನ್ನು ಜಡಬ್ರಾಹ್ಮಣ್ಯದ ಪ್ರತೀಕಗಳಾಗಿರುವ ಪ್ರಾಣೇಶಾಚಾರ್ಯರನ್ನಾಗಲಿ, ಹಣಕ್ಕಾಗಿ ಹವಹಡಿಸುವ ಉಳಿದ ಬ್ರಾಹ್ಮಣರಲ್ಲಾಗಲಿ ಕಾಣಲು ಸಾಧ್ಯವಿಲ್ಲ.

ಅನಂತಮೂರ್ತಿಯವರ ಎರಡನೆ ಕಾದಂಬರಿಯಾದ 'ಭಾರತೀಪುರ'ದಲ್ಲಿ ಬರುವ ಜಗನ್ನಾಥ ಪ್ರಾಣೇಶಾಚಾರ್ಯರ ವಿದೇಶೀ ಶಿಕ್ಷಣ ಪಡೆದ ಬ್ರಾಹ್ಮಣ್ಯದ ಮುಂದುವರಿದ ಮಾಡೆಲ್. ಇವನಿಗೆ ಇಂಗ್ಲೆಂಡಿನಲ್ಲಿದ್ದರೂ ತಾನು ಕ್ರಿಯಾಶೀಲನಲ್ಲವೆಂದು ಮನವರಿಕೆಯಾಗಿ ಅದನ್ನು ಕಾರ್ಯರೂಪಕ್ಕೆ ತರಲೆಂದು ಭಾರತಕ್ಕೆ ಮರಳುತ್ತಾನೆ. ಊರಿನ ಕೇಂದ್ರವಾದ ಮಂಜುನಾಥ ಎಲ್ಲವನ್ನೂ ನಿಯಂತ್ರಿಸುತ್ತಾ ಬಂದಿರುವುದರಿಂದ ಹೊಲೆಯರ ವಿಮೋಚನೆಗೆ ಅವರ ಸಂಘಟನೆಯಾಗದೆ, ಏನನ್ನೂ ಮಾಡಲು ಸಾಧ್ಯವಿಲ್ಲವೆಂದು ಭಾವಿಸಿ ಅದರ ಒಂದು ಅಂಗವಾಗಿ ಅವರನ್ನೂ ಮಂಜುನಾಥನ ದೇವಾಲಯಕ್ಕೆ ಹೋಗಿಸುವ ಪ್ರಯತ್ನ ಮಾಡಿದ. ಆದರೆ ಅಲ್ಲಿಗೆ ಹೋದರೆ ಅಲ್ಲಿ ಮಂಜುನಾಥನೇ ಇಲ್ಲ. ಗುಡಿಯ ಪೂಜಾರಿಯ ಮಗ ತಂದೆಯ ಮೇಲಿನ ಸಿಟ್ಟಿನಿಂದ ಹೊಳೆಗೆ ತೆಗೆದು ಕೊಂಡು ಹೋಗಿ ಎಸೆದಿರುತ್ತಾನೆ. ಹೀಗಾಗಿ ಜಗನ್ನಾಥನ ಹೊಲೆಯರ ವಿಮೋಚನೆಯ ಭ್ರಮೆ ಅರ್ಧದಲ್ಲಿ ಕೈ ಕೊಡುತ್ತದೆ. ಇಲ್ಲಿಯ ವೈಫಲ್ಯಕ್ಕೆ ಜಗನ್ನಾಥನ ಬೂಜ್ವಾಳೆ ಹಿನ್ನೆಲೆ ಹುಸಿ ಕ್ರಾಂತಿಕಾರತೆಗಳು ಕಾರಣವಾಗಿವೆ.

ಅನಂತಮೂರ್ತಿಯವರ 'ಅವಸ್ಥೆ' ಸಂಸ್ಕೃತಿಯ ರಾಜಕೀಯ ಸ್ವರೂಪವನ್ನು ವಿಶ್ಲೇಷಿಸುತ್ತದೆ. ಅದರಲ್ಲಿ ಬರುವ 'ಕೃಷ್ಣಪ್ಪ' ಭ್ರಷ್ಟ ರಾಜಕೀಯ ವಾತಾವರಣಕ್ಕೆ ಬಲಿಯಾಗದೆ ಉಳಿದು ಕೊಳ್ಳಲು ತನ್ನ ಹಳ್ಳಿಗೆ ಹಿಂದಿರುಗುತ್ತಾನೆ. ಇದು ಅದಕ್ಕೆ ಪರ್ಯಾಯವೇ ಎನ್ನುವುದು ಚಿಂತನೆಗೆ ಅರ್ಹವಾಗಿದೆ.

ಈಚಿನ ಕಾದಂಬರಿಯಾದ 'ಭವ'ದಲ್ಲಿ 'ವಿರೂಪಾಕ್ಷ ಶಾಸ್ತ್ರಿ' ಸಂಸ್ಕಾರದ ಪ್ರಾಣೇಶಾಚಾರ್ಯರಿಗೆ ವಿರುದ್ಧವಾದ ವ್ಯಕ್ತಿತ್ವವಾಗಿದೆ. ಅಲ್ಲಿ ತನ್ನ ಹೆಂಡತಿಗೆ (ರೋಗಿಷ್ಠ) ಸೇವೆಯನ್ನು ಸಲ್ಲಿಸಿ ತನ್ನ ಸಾಧನೆಗೆ ಮಾರ್ಗವಾಗಿ ಮಾಡಿಕೊಂಡರೆ, ಇಲ್ಲಿ ತನ್ನ ಹೆಂಡತಿಯ ಮೇಲಿನ ಸಂಶಯದಿಂದ ಅವಳನ್ನು ಕೊಂದು ನೆಲದಲ್ಲಿ ಹೂಳುವುದಕ್ಕೂ ಅವನು ಹಿಂಜರಿಯುವುದಿಲ್ಲ. ಅವನಿಗೆ ರೈಲಿನಲ್ಲಿ ಭೇಟಿಯಾಗುವ ಸುಧಾಕರ ಮಾತ್ರ ಸ್ಟಾರ್ ಟಿ.ವಿ. ಸಂಸ್ಕೃತಿಯಿಂದ ಬೇಸತ್ತು ತನ್ನ ನೆಲದ ಬೇರುಗಳನ್ನು ಹುಡುಕುತ್ತ ಹೋರಾಡುತ್ತಾನೆ. ತಾನು ಯಾರು ಎಂಬುದೇ ಅವನ ಮುಂದಿನ ಆಧ್ಯಾತ್ಮಿಕ ಪ್ರಶ್ನೆಯಾಗಿದೆ. ಇವನು 'ಭಾರತೀಪುರ'ದ ಜಗನ್ನಾಥನಿಗಿಂತ ಬೇರೆಯಾದವನು. ಅವನಿಗೂ ಇವನಿಗೂ ಇರುವ ಸಾಮ್ಯವೆಂದರೆ ಇಬ್ಬರೂ ಈ ನೆಲದಲ್ಲಿ ಬೇರುಗಳಿಲ್ಲದವರಾಗಿರುವುದು. ಅವನು

### ಡಾ. ಯು. ಆರ್. ಅನಂತ ಮೂರ್ತಿ ಅವರಿಗೆ ಸಂದಿರುವ ಪದವಿ ಮತ್ತು ಪ್ರಶಸ್ತಿಗಳು

| | |
|---|---|
| ಪಿ.ಎಚ್.ಡಿ. (ಬರ್ಮಿಂಗ್ಹಾಂಮ್ ವಿ.ವಿ.) | 1966 |
| ಅತ್ಯುತ್ತಮ ಚಿತ್ರಕತೆಗಾಗಿ (ಸಂಸ್ಕಾರ) ಪ್ರಶಸ್ತಿ | 1970 |
| ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ | 1983 |
| ಕರ್ನಾಟಕ ಸರ್ಕಾರದಿಂದ 'ಅತ್ಯುತ್ತಮ ಸಾಹಿತಿ' ಪ್ರಶಸ್ತಿ | 1984 |
| ಸಾಹಿತ್ಯದಲ್ಲಿನ ಸಾಧನೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ | 1984 |
| ಕುಲಪತಿ, ಮಹಾತ್ಮಗಾಂಧಿ ವಿಶ್ವವಿದ್ಯಾಲಯ ಕೊಟ್ಟಾಯಂ | 1987-91 |
| ಚೇರ್‌ಮನ್, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ | 1992-93 |
| ಅಧ್ಯಕ್ಷರು ಸಾಹಿತ್ಯ ಅಕಾಡೆಮಿ | 1993 |
| ಮಾಸ್ತಿ ಪ್ರಶಸ್ತಿ | 1994 |
| ಗೌರವ ಡಿ.ಲಿಟ್ ರವೀಂದ್ರ ಭಾರತಿ ವಿಶ್ವವಿದ್ಯಾಲಯ ಕಲ್ಕತ್ತ | 1995 |
| ಜ್ಞಾನಪೀಠ ಪ್ರಶಸ್ತಿ | 1995 |

ಸಾಮೂಹಿಕ ನೆಲೆಯಲ್ಲಿ ಬದಲಾವಣೆಯನ್ನು ತರಲು ಯತ್ನಿಸಿ ವಿಫಲನಾದರೆ, ಇವನು ಹಲವಾರು ಹೆಣ್ಣುಗಳ ಸಂಗದಲ್ಲಿ ತನ್ನತನವನ್ನು ಅರಸುತ್ತಾ ಸೋತವನು. ವಿರಕ್ತಿಯನ್ನು ಬೆಳೆಸಿಕೊಳ್ಳಲು ಯತ್ನಿಸಿದವನು. ಇವರಿಬ್ಬರ ಸಮಸ್ಯೆ ಈ ಬಗೆಯದಾದರೆ ತನ್ನ ತಂದೆಯವರು ಯಾರು ಎಂದು ತಿಳಿಯದ ಪ್ರಸಾದನದು ಇನ್ನೊಂದು ಬಗೆಯದು. ಅವನು ಸಂಗೀತವನ್ನೇ ಗಾನ ಯೋಗವನ್ನಾಗಿ ಮಾಡಿಕೊಂಡು ನೈತಿಕ ಚಟುವಟಿಕೆಗಳನ್ನೆಲ್ಲ ಮೀರುವಂತೆ ಕಾಣಿಸುತ್ತದೆ.

ಹೀಗೆ ಅನಂತಮೂರ್ತಿಯವರ ಕಥಾ ಸಾಹಿತ್ಯ ವ್ಯಕ್ತಿಯನ್ನು ಅವನ ಅಂತರಂಗ, ಮತ್ತು ಬಹಿರಂಗಗಳಲ್ಲಿನ ದ್ವಂದ್ವ ಮಾನತೆಯನ್ನಲ್ಲದೆ, ಅವನನ್ನು ರೂಪಿಸಿದ ಸಂಸ್ಕೃತಿಯಲ್ಲಿನ ದ್ವಂದ್ವಗಳನ್ನು, ಬಿಕ್ಕಟ್ಟುಗಳನ್ನು ಗುರುತಿಸಿ, ಅದರ ಸವಾಲುಗಳನ್ನು ಎದುರಿಸುತ್ತಾರೆ. ಇವು ಆಧುನಿಕ ಭಾರತೀಯ ಸಮಾಜದಲ್ಲಿ ಸುಶಿಕ್ಷಿತ ಎದುರಿಸುವ ಸವಾಲುಗಳ ಸಮರ್ಥ ಅಭಿವ್ಯಕ್ತಿಯಾಗಿರುವುದು ಅವರ ಕಥಾ ಸಾಹಿತ್ಯದ ಮಹತ್ವವಾಗಿದೆ.

### ಎರಡನೆಯದಾಗಿ ಗಂಡು-ಹೆಣ್ಣಿನ ಸಂಬಂಧ

ಇಲ್ಲಿಯೂ ಸಹ ಬ್ರಾಹ್ಮಣ ಯುವಕರ ದ್ವಂದ್ವಗಳನ್ನು ಗುರುತಿಸ ಬಹುದಾಗಿದೆ. `ಪ್ರಶ್ನೆ' ಮತ್ತು `ಕ್ಲಿಪ್ ಜಾಯಿಂಟ್' ಕಥೆಗಳನ್ನು ಇದಕ್ಕೆ ನಿದರ್ಶನವಾಗಿ ನೋಡಬಹುದು. `ಪ್ರಶ್ನೆ' ಕಥೆಯಲ್ಲಿ ಬರುವ `ರಂಗನಾಥ' ಮತ್ತು `ಕ್ಲಿಪ್ ಜಾಯಿಂಟ್' ಕಥೆಯ ಕೇಶವ, ರಂಗನಾಥನಿಗೆ ಬಾಲ್ಯದಿಂದ ಒಡನಾಡಿಯಾದ ಶಾರದೆಯನ್ನು ಮದುವೆಯಾಗುವ ಆಸೆ. ಶಾರದೆಗೂ ಆಸೆಯಾದರೂ ಅದಕ್ಕೆ ಅಡ್ಡಿಯೆಂದರೆ ಅವಳ ಮಾವ. ಆ ಮಾವನಿಗೆ ತಲೆತಲಾಂತರದ ಶಾಪದ ಭೀತಿ. ರಂಗನಾಥನಿಗೆ ಶೂದ್ರಳಾದ ಲಚ್ಚಿ ಹಾಸಿಗೆಯ ಸುಖಕ್ಕೆ ಹೇಳಿ ಮಾಡಿಸಿದಂತೆ ಕಾಣಿಸಿದರೆ ಶಾರದೆ ಶುಭ್ರ ಶ್ವೇತ ಸುಂದರಿ. ಅವನ ಸಮಸ್ಯೆ ಎಂದರೆ `ಒಂದೇ ಶಯ್ಯೆಯಲ್ಲಿ ಆತ್ಮಕ್ಕೂ ಆಗಬೇಕು, ದೇಹಕ್ಕೂ ಆಗಬೇಕು' ಎನ್ನುವ ಹಂಬಲ. ಇದರಿಂದ ಅವನಿಗೆ ಶಾರದೆಯೇ ಆಗಬೇಕು. `ದೇಹ ಬೇರೆ ಆತ್ಮ ಬೇರೆ' ಎನ್ನುವ ಕಲ್ಪನೆಯೇ ಬ್ರಾಹ್ಮಣ ಸಂಸ್ಕೃತಿ ಹುಟ್ಟಿ ಹಾಕಿರುವ ಭ್ರಮೆಗಳಲ್ಲಿ ಒಂದು. ರಂಗನಾಥ ಅದರ ಬಲಿಪಶು.

`ಕ್ಲಿಪ್ ಜಾಯಿಂಟ್' ಕಥೆಯ ಕೇಶವನಿಗಾದರೂ ತಾನು ಬೆಳೆದ ಉಸಿರುಕಟ್ಟುವ ಬ್ರಾಹ್ಮಣ ಕುಟುಂಬದ ಪರಿಸರದಿಂದ ಓಡಿ ಹೋಗಿ ಉನ್ನತ ವಿದ್ಯಾಭ್ಯಾಸ ನೆಪದಲ್ಲಿ ಇಂಗ್ಲೆಂಡ್ ಸೇರುತ್ತಾನೆ. ಅಲ್ಲಿ ಅವನಿಗೆ ತಾನು ಇಲ್ಲಿಯವರೆಗೆ ವಂಚಿತವಾದ ಅನುಭವಗಳನ್ನು ಸೂರೆ ಹೊಡೆಯುವ ತವಕ. ಅದಕ್ಕಾಗಿ ಹುಡುಕಿಕೊಂಡು ಹೋಗುತ್ತಾನೆ. ಅಲ್ಲಿ ಕ್ಯಾಬರೆಯ ಲೂಸಿಯ ನಗ್ನ ಮೊಲೆಗಳಲ್ಲಿ ಅವನಿಗೆ ಕಾಣಿಸುವುದು, ಕಾಡುವುದು ತನ್ನ ಭೂತವೆ. ಮದುವೆಯಾಗಿ ಹುದಿಗಾಲಲ್ಲಿ ನಿಂತಿರುವ ತಂಗಿಯರೇ. ಹೀಗೆ ಅವನು ಅಲ್ಲಿಯೂ ಸಲ್ಲದ - ಇಲ್ಲಿಯೂ ಸಲ್ಲದವನಾಗಿ ತ್ರಿಶಂಕುವಾಗಿ ಬಿಡುವ ದುರ್ಬಲ ನಾಯಕರ ಪ್ರತೀಕವಾಗಿದ್ದಾನೆ.

> **"ನನ್ನ ದೃಷ್ಟೀಲಿ ಹೆಚ್ಚು ಪರಿಪೂರ್ಣ ಸಾಕ್ಷಾತ್ಕಾರ ಸಾಹಿತ್ಯದಲ್ಲಿ ಸಿಕ್ಕಿ ಬಿಡುತ್ತೆ. ಯಾಕೇ ಅಂದ್ರೆ ಸಾಹಿತ್ಯದಲ್ಲಿ ಪ್ರಾಕ್ಟಿಕಲ್ ಆದದ್ದು ಮಾತ್ರ ಸತ್ಯ ಅಲ್ಲ. ಮನಸ್ಸಿಗೆ ಭಾವನೆಗೆ ನಿಲುಕುವುದೆಲ್ಲವೂ ಸಾಹಿತ್ಯದಲ್ಲಿ ಸತ್ಯವೇ."**
>
> *(ಸುಧಾ, 1 ಜನವರಿ 95 ರಿಂದ ಸಂಗ್ರಹಿಸಿದ್ದು)*

### ಮೂರನೆಯದಾಗಿ ದಾಂಪತ್ಯ ಪರಿಕಲ್ಪನೆ

ಇದಕ್ಕೆ ಒಳ್ಳೆಯ ನಿದರ್ಶನವೆಂದರೆ ಅವರ `ಪ್ರಶ್ನೆ' ಕಥೆಯಲ್ಲಿ ಬರುವ ಮೂರು ತಲೆಮಾರಿನ ದಾಂಪತ್ಯ ಚಿತ್ರ. ಸೂಳೆಯಲ್ಲಿ ಮುಕ್ತಿ ಕಂಡು, ಕಡೆಗಾಲದಲ್ಲಿ ಹೆಂಡತಿಯ ಮುಖವನ್ನು ಕನ್ನಡಿಯಲ್ಲಿ ಕಾಣುವ ಸುಬ್ಬಯ್ಯ 60ನೇ ವಯಸ್ಸಿನ ಸೀತಕ್ಕನನ್ನು ಹಿಡಿದು ಕೊಳ್ಳಲು ಬಂದಾಗ ಓಡಿ ಹೋಗುತ್ತಾಳೆ. ವಿಷಮ ದಾಂಪತ್ಯದಿಂದ ನರಳಿದ ಸದಾ ಸಂಶಯದಲ್ಲಿ ತೊಳಲಾಡುವ ವೆಂಕಮ್ಮ, ಕಲಿತ ಹೆಂಡತಿಯ ಜೊತೆಯಲ್ಲಿ ಸರಸದಿಂದ ಇರುವ ಪುಂಡರೀಕ ನೇತ್ರಾವತಿಯರ ವೈವಾಹಿಕ ಸಂಬಂಧದ ಜಟಿಲತೆಯನ್ನು ಸೆರೆ ಹಿಡಿಯುತ್ತದೆ. `ಹೆಂಡತಿಯನ್ನು ಪ್ರೀತಿಸಬಾರದೆ', `ಹೆಸರು ಹಿಡಿದು ಕರೆಯಬಾರದೆ' ಎಂದು ಹಂಬಲಿಸುವ ಗಂಡು ಹೆಣ್ಣಿನ ದಾಂಪತ್ಯ ಜೀವನದ ಆರೋಗ್ಯವಂತ ಸಂಬಂಧಕ್ಕಾಗಿ ತುಡಿಯುತ್ತದೆ.

### ನಾಲ್ಕನೆಯದಾಗಿ ವಿಧ್ಯುಕ್ತ ಕ್ರಿಯೆಗಳು

ಬ್ರಾಹ್ಮಣ ಸಂಸ್ಕೃತಿಯ ಹೊರ ವಿವರಗಳು ಪ್ರಕಟವಾಗುವುದು, ಅವರ ವಿಧಿ ಆಚರಣೆಗಳಲ್ಲಿನ ಅಮಾನವೀಯತೆಗಳು ವ್ಯಕ್ತಗೊಂಡಿರುವುದು ಅವರ `ಘಟಶ್ರಾದ್ಧ' ಮತ್ತು `ಪ್ರಕೃತಿ' ಕಥೆಗಳಲ್ಲಿ. ಎರಡರಲ್ಲೂ `ಯಮುನಕ್ಕ' ಮತ್ತು `ಲಕ್ಷ್ಮಿಯ'ರು ಬಾಲ್ಯದಲ್ಲೇ ಗಂಡಂದಿರನ್ನು ಕಳೆದು ಕೊಂಡು ವಿಧವೆಯಾದರು. ಬಲವಂತವಾಗಿ ತಮ್ಮ ಹರೆಯದ ಹಸಿವನ್ನು ಅದುಮಿಟ್ಟು ಕೊಳ್ಳಬೇಕಾಗಿ ಬಂದಾಗ ಸಹಜವಾಗಿಯೇ ಅದು ತನ್ನ ತೃಪ್ತಿಯ ತಾಣಗಳನ್ನು ಕಂಡು ಕೊಳ್ಳಲು ಯತ್ನಿಸುತ್ತದೆ. ಯಮುನಕ್ಕ ಮಾಸ್ತರ ಸಂಬಂಧವನ್ನು ಪಡೆದು ಬಸಿರಾದರೆ `ಲಕ್ಷ್ಮಿ' ಊರಿನ ಯುವಕನೊಬ್ಬನನ್ನು ತಬ್ಬಿಕೊಂಡು ಮಲಗುತ್ತಾಳೆ. ಹೀಗೆ ನಿಸರ್ಗದ ವಿರುದ್ಧದ ಹೋರಾಟದಲ್ಲಿ ವಿಫಲಗೊಂಡು ಅದಕ್ಕೆ ಶರಣಾಗುತ್ತಾರೆ. ಅದಕ್ಕೆ ಅವರು ಅನುಭವಿಸ ಬೇಕಾದ ಪ್ರಾಯಶ್ಚಿತ್ತ ಮಾತ್ರ ಘೋರವಾದದ್ದು. ಯಮುನಕ್ಕ ಬಲವಂತವಾಗಿ ಗರ್ಭಪಾತ ಮಾಡಿಸಿಕೊಳ್ಳಬೇಕಾಗಿ ಬಂದು ಕಡೆಗೆ ಬ್ರಾಹ್ಮಣರಿಂದ ಜೀವಂತ `ಘಟಶ್ರಾದ್ಧ'ಕ್ಕೆ ಒಳಗಾಗ ಬೇಕಾಗುತ್ತದೆ. ಕಡೆಗೆ ಬಾಲಕ ನಾಣಿ ಕೇಳುವ ``ಅಮ್ಮ ಬಸಿರಾಗುವುದಿಲ್ಲವೇ, ಯಮುನಕ್ಕ ಬಸಿರಾದರೆ ತಪ್ಪೇನು?" ಎನ್ನುವುದು ಮರ್ಮ ಘಾತಕವಾಗಿದೆ. ಕಡೆಗೆ ಅವರು ಚಿಕ್ಕ ಹುಡುಗಿಯನ್ನು ಅಡುಗೆಗೆಂದು ಮದುವೆಯಾಗುವುದು ವಿಡಂಬನೆಯಾಗಿದೆ.

೩

ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಸಂಸ್ಕೃತಿಯ ವಿಘಟನೆಯ ಸಾಧನೆ ಮತ್ತು ಮಿತಿಗಳನ್ನು ಹೀಗೆ ಗುರುತಿಸಬಹುದು. ಅನಂತಮೂರ್ತಿ ಕಥಾ ಸಾಹಿತ್ಯದ ಮಟ್ಟಿಗೆ `ಸಂಸ್ಕೃತಿ' ಎನ್ನುವುದು ಬ್ರಾಹ್ಮಣ ಸಂಸ್ಕೃತಿ ಎಂದೂ, ಅದು ವೈದಿಕ ಸಂಸ್ಕೃತಿಯ ಜಡಗೊಂಡ ರೂಪವನ್ನು ಬಹುತೇಕ ಪ್ರತಿನಿಧಿಸುತ್ತದೆಂದು ಮೇಲಿನ ವಿಶ್ಲೇಷಣೆಯಿಂದ ಕಂಡು ಕೊಳ್ಳಬಹುದಾಗಿದೆ. ಅವರು ಮೇಲಿನ ಎಲ್ಲವನ್ನು ಕಾಣಿಸುವುದು, ಶೋಧಿಸುವುದು ತಾವು ಬೆಳೆದು ಬಂದ ಬ್ರಾಹ್ಮಣ ಸಂಸ್ಕೃತಿಯ ಕೃತಕತೆಯುಳ್ಳ ಜೀವ ವಿರೋಧಿ ನೆಲೆಗಳನ್ನು ಅದು ಹೇಗೆ ಜಡವಾಗಿದೆ, ಕ್ರಿಯಾಶೀಲತೆ ಯನ್ನು ಕಳೆದು ಕೊಂಡು ಅಮಾನುಷವಾಗಿದೆ ಎಂಬುದು, ಇದು ಅವರ ಸಾಧನೆ. ಅದಕ್ಕೆ ಪರ್ಯಾಯವಾಗಿ ಪ್ರಕೃತಿದತ್ತವಾಗಿ ಬದುಕುವುದರಲ್ಲಿ ಶೂದ್ರ ಸಂಸ್ಕೃತಿಯ ಸಂಪರ್ಕದಿಂದ ಮಾತ್ರ ಬ್ರಾಹ್ಮಣ ಸಂಸ್ಕೃತಿಯ ಕಾಯಕಲ್ಪ ಸಾಧ್ಯವೆಂದು ಅವರ ಕಥಾ ಸಾಹಿತ್ಯದಲ್ಲಿ ದಟ್ಟವಾಗಿ ಪ್ರಕಟವಾಗಿದೆ. ಈಚೆಗೆ ಅವರು ತರಂಗದ ಸಂದರ್ಶನದಲ್ಲಿ ಹೇಳಿರುವ ``ವೈದಿಕ ಮತ್ತು ಬ್ರಾಹ್ಮಣ' ಸಂಸ್ಕೃತಿಗಳ ಟೀಕೆ ಮಾಡದಿದ್ದರೆ ತಾನು ಲೇಖಕನಾಗುವುದೇ ಸಾಧ್ಯವಾಗುತ್ತಿರಲಿಲ್ಲ'' ಎಂಬ ಮಾತುಗಳನ್ನು ನಾವು ಮೇಲಿನ ಹಿನ್ನೆಲೆಯಲ್ಲಿ ಗ್ರಹಿಸಬಹುದು. ಆದರೆ ಅವರ ಕಥೆಗಳ ಪ್ರಧಾನ ಮಿತಿಯೆಂದರೆ ಅವರ ಕಥಾ ವಸ್ತು ಬ್ರಾಹ್ಮಣ ಪಾತ್ರಗಳ ಸುತ್ತ ಗಿರಕಿ ಹೊಡೆಯುವುದು. ಉಳಿದ ವರ್ಗದವರು ಅವರ ವ್ಯಕ್ತಿತ್ವದ ಪೋಷಣೆಗೆ ಸಹಾಯಕರಾಗಿಯೋ ಸಾಧನಗಳಾಗಿಯೋ ರೂಪುಗೊಂಡಿರುವುದು. ಆದ್ದರಿಂದ ಅನಂತಮೂರ್ತಿ ಕಥಾ ಸಾಹಿತ್ಯ ಪ್ರಧಾನ ಸಂವೇದನೆ `ಬ್ರಾಹ್ಮಣ್ಯ' ಎಂದು ಕರೆದರೆ ತಪ್ಪಿಲ್ಲವೇನೂ ಎನ್ನುವ ಗುಮಾನಿ ನನ್ನನ್ನು ಕಾಡಿದೆ. ಆದರೆ ಇದು ಕೇವಲ ಕೇವಲ ಅನಂತಮೂರ್ತಿ ಕಥಾ ಸಾಹಿತ್ಯಕ್ಕೆ ಮಾತ್ರ ಮೀಸಲಾಗದೆ ಉಳಿದ ನಮ್ಮ (ಒಬ್ಬಿಬ್ಬರನ್ನು ಹೊರತು ಪಡಿಸಿದರೆ) ಲೇಖಕರಿಗೂ ಅನ್ವಯಿಸುತ್ತದಲ್ಲವೇ?

(ಕೃಪೆ: `ಕರ್ನಾಟಕ ಮಲ್ಲ')

# ಸಂಮೋಹಿನಿ ಚಿಕಿತ್ಸೆ - 8

● ಡಾ| ಉಷಾರಾವ್

## ಮನೋನರ ದೌರ್ಬಲ್ಯಕ್ಕೆ ಸಂಮೋಹಿನಿ ಚಿಕಿತ್ಸೆ

ಸಂಮೋಹಿನಿ ಎಲ್ಲ ರೋಗಗಳನ್ನು ಗುಣಪಡಿಸುವ ಸಂಜೀವಿನಿಯಲ್ಲ, ಪೆನ್ಸಿಲಿನ್ ಔಷಧ ಒಂದು ಸರ್ವರೋಗ ನಿವಾರಣೆ ಎಂದು ಭಾವಿಸುವುದು ಎಷ್ಟು ಮೂರ್ಖತನವೋ ಸಂಮೋಹಿನಿ ಬಗ್ಗೆ ಹಾಗೆ ಭಾವಿಸುವುದೂ ಅಷ್ಟೇ. ವೈದ್ಯಕೀಯದಲ್ಲಿ ಅನೇಕ ವಿಭಾಗಗಳಲ್ಲಿ ಸಂಮೋಹಿನಿಯ ಉಪಯುಕ್ತತೆ ಬಗ್ಗೆ ಸಾಕಷ್ಟು ಹೇಳಲಾಗಿದೆ. ಅಲ್ಲದೆ ಸಂಮೋಹಿನಿ ನರಗಳ ವ್ಯವಸ್ಥೆಯ ಮೇಲೆ ಅತ್ಯಂತ ಶಕ್ತಿಯುತ ಪರಿಣಾಮ ಬೀರಬಲ್ಲುದು ಎಂಬುದನ್ನು ನೀವು ಗಮನಿಸಬೇಕು. ಅತ್ಯಧಿಕ ಸಂಖ್ಯೆಯ ಮಾನಸಿಕ ದೌರ್ಬಲ್ಯಗಳ ಗುಂಪಿಗೆ ಸೇರಿದ ``ಸೈಕೋನ್ಯುರೋಸಿಸ್'' ಎಂಬ ಲಘು ಮನೋನರ ದೌರ್ಬಲ್ಯಗಳ ಚಿಕಿತ್ಸೆಯಲ್ಲಿ ಸಂಮೋಹಿನಿ ಅಪಾರ ಉಪಯುಕ್ತತೆ ಹೊಂದಿದೆ. ನ್ಯೂರೋಸ್ತೇನಿಯ, ಆಂಗ್ಸೈಟಿ ನ್ಯೂರೋಸಿಸ್, ಆಂಗ್ಸೈಟಿ ಹಿಸ್ಟೀರಿಯಾ, ಹಿಸ್ಟೀರಿಯಾ, ಅಬ್ಸೆಷನಲ್ ನ್ಯೂರೋಸಿಸ್ ಮತ್ತು ಮಾನಸಿಕ ಕುಸಿತ (ಡಿಪ್ರೆಷನ್) - ಇವು ಈ ಗುಂಪಿಗೆ ಸೇರಿದ ಅತ್ಯಂತ ಸಾಮಾನ್ಯ ಮನೋನರ ದೌರ್ಬಲ್ಯಗಳು.

ಈ ಬಗೆಯ ತೊಂದರೆಗಳಿಂದ ನರಳುವವರಲ್ಲಿ ಸರಾಸರಿ ಅರ್ಧಕ್ಕೂ ಹೆಚ್ಚು ಮಂದಿ ಡಾಕ್ಟರ ಬಳಿ ಹೋದಾಗ ಅದು ಕೇವಲ ``ಊಹಾತ್ಮಕ'' ತೊಂದರೆ ಎಂದೂ ಜಡತನವನ್ನು ಬಿಟ್ಟು ಧೈರ್ಯದಿಂದ ಅದನ್ನೆದುರಿಸಬೇಕೆಂದೂ ಹೇಳಲಾಗುತ್ತಿದೆ. ಆದರೆ ಈ ಬಗೆಯ ಉಪದೇಶ ನಿರುಪಯುಕ್ತವಾದುದು ಎಂಬುದನ್ನು ಈಗ ಅರ್ಥ ಮಾಡಿ ಕೊಳ್ಳಲಾಗುತ್ತಿದೆ. ಅವರ ತೊಂದರೆಗಳಿಗೆ ಮೂಲ ಕಾರಣ ನರಗಳಿಗೆ ಸಂಬಂಧಿಸಿದುದ್ದಾಗಿರಬಹುದಾದರೂ, ಬೇರೆ ಅಂಗಗಳಿಗೆ ಸಂಬಂಧಿಸಿದ ತೊಂದರೆಗಳಲ್ಲಿ ಅನುಭವಿಸುವಷ್ಟೇ ದೌರ್ಬಲ್ಯದಿಂದ ನರಳುವರು. ಉದಾಹರಣೆಗೆ ಪಾರ್ಶ್ವವಾಯುವಿಗೆ ತುತ್ತಾದ ಕೈ ಅಥವಾ ಕಾಲು ಅದು ಹಿಸ್ಟೀರಿಯಾ ಅಥವಾ ಯಾವುದೇ ಶಾರೀರಿಕ ಕಾರಣಗಳಿಂದಾಗಲಿ ಅದು ಅಷ್ಟೇ ಅನಾನುಕೂಲಕರ ಹಾಗೂ ನಿರುಪಯುಕ್ತ.

ಅನೇಕ ಬಗೆಯ ನರ ದೌರ್ಬಲ್ಯಗಳ ಚಿಹ್ನೆಗಳು ನಿಜವಾದ ಶಾರೀರಕ ವ್ಯಾಧಿಯಂತೆಯೇ ತೋರಬಹುದು. ಆದುದರಿಂದ `ಸಂಧಿವಾತ'ಕ್ಕೆ ಸಂಬಂಧಿಸಿದುದೆಂದು ನಂಬಲಾದ ನೋವು ಮತ್ತು ಇತರ ಯಾತನೆಗಳ ಮೂಲ ನರ ದೌರ್ಬಲ್ಯವಾಗಿರಬಹುದು. ಮೊದಲ ನೋಟಕ್ಕೆ ಇದನ್ನು ವಿವರಿಸುವುದು ಹೇಗೆ ಎಂಬುದು ಕಷ್ಟಕರವಾಗಿ ತೋರಬಹುದು. ಚಿಂತೆ ಮತ್ತು ಕಾತರ ನರಗಳ ಮೇಲೆ ಒತ್ತಡ ಉಂಟುಮಾಡಿ ಅದು ಸ್ನಾಯುಗಳಲ್ಲಿ ನೋವು ಹಾಗೂ ಸೆಡೆತವನ್ನು ಉಂಟು ಮಾಡಬಹುದು ಎಂಬುದನ್ನು ನಾನು ನೆನಪಿಸಿ ಕೊಂಡಾಗ `ಸ್ನಾಯುಗಳಿಗೆ ಸಂಬಂಧಿಸಿದ ಸಂಧಿವಾತ' ಎಂದು ಹೇಳಲಾಗುವ ವ್ಯಾಧಿಯ ಮೂಲ ನರಗಳಿಗೆ ಸಂಬಂಧಿಸಿದುದು ಎಂದು ಹೇಳಲು ಸುಲಭವಾಗುವುದು.

ಸ್ನಾಯುಗಳ ಸೆಡೆತದಿಂದಾಗಿ `ಟಾರ್ಟಿಕಾಲಿಸ್' (ಕಂಡವಾತ), ಅಥವಾ `ರೈನೆಕ್' (ಕುತ್ತಿಗೆಯ ಸೆಳೆತ) ಮುಂತಾದ ತೊಂದರೆಗಳಿಗೆ ಹಾದಿಯಾಗಬಹುದು.

ನಮ್ಮ ಕ್ಲಿನಿಕ್‌ನಲ್ಲಿ ಶ್ರೀಮತಿ ``ಕ್ಯು'' ಅವರಿಗೆ ನಾವು ಚಿಕಿತ್ಸೆಯನ್ನು ಪ್ರಾರಂಭಿಸಿದಾಗ ಈ `ಟಾರ್ಟಿಕಾಲಿಸ್' ಸ್ಥಿತಿಯನ್ನು ಕಂಡು ಹಿಡಿಯಲಾಯಿತು. ಆದುದರಿಂದ ಆಕೆಯ ಪ್ರಕರಣವನ್ನು ಹೇಳುವುದು ಒಳ್ಳೆಯದು. ಆಕೆ ವಯಸ್ಸಾದ ಮಹಿಳೆ. ತನ್ನ ಕುತ್ತಿಗೆ ಸದಾ ಒಂದೇ ಪಕ್ಕಕ್ಕೆ ಎಳೆಯುತ್ತದೆ ಎಂಬುದು ಆಕೆಯ ದೂರು. ಆಕೆಗೆ ಬೇರಾವ ತೊಂದರೆಯೂ ಇರಲಿಲ್ಲ. ಆಕೆಯೊಡನೆ ನಾವು ಸುಮಾರು ಅರ್ಧ ಗಂಟೆ ಮಾತನಾಡಿದ ನಂತರ ತಿಳಿದು ಬಂದದ್ದು, ಆಕೆ ಅಪಾರವಾಗಿ ಹಚ್ಚಿಕೊಂಡಿದ್ದ ಒಬ್ಬ ವ್ಯಕ್ತಿಯನ್ನು ಎದುರಿಸಲು ತನಗೆ ಸಾಧ್ಯವಾಗುತ್ತಿಲ್ಲ ಎಂಬ ದೃಢ ಭಾವನೆ ಆಕೆಯಲ್ಲಿ ಉಂಟಾಗಿತ್ತು ಎಂಬುದು. ಪರಿಣಾಮವಾಗಿ ಆಕೆಯ ಕುತ್ತಿಗೆಯ ಸ್ನಾಯುಗಳು ಸೆಡೆತಕ್ಕೆ ಗುರಿಯಾಗಿ, ತಲೆಯನ್ನು ಒಂದು ಪಕ್ಕಕ್ಕೆ ಎಳೆಯಲಾರಂಭಿಸಿತು. ಆದುದರಿಂದ ಅವಳಿಗೆ ನೇರವಾಗಿ ಎದುರಿಗೆ ನೋಡಲು ಸಾಧ್ಯವಾಗದಾಯಿತು. ಮನಸ್ಸನ್ನು ಅರಿತು ಕೊಳ್ಳದಿದ್ದರೆ ಇಂಥ ಪ್ರಕರಣಗಳು ನಿಗೂಢವಾಗಿ ಉಳಿಯುತ್ತವೆ.

ಮಿಸ್ಟರ್ `ಪಿ' ಎಂಬುವರದೂ ಇದೇ ಬಗೆಯ ಪರಿಸ್ಥಿತಿಯಾಗಿತ್ತು. ಆತ ಕುಟುಂಬದ ಮೊದಲನೆಯ ಮಗನಾಗಿದ್ದರು. ಆತನನ್ನು ವಿದ್ಯಾವಂತನಾಗಿ ಮಾಡಲು ಅವರ ತಂದೆ ಬಹಳ ಕಷ್ಟ ಪಟ್ಟರು. ಆದರೆ ಆತ ಬಿ.ಕಾಂ. ಪರೀಕ್ಷೆಯನ್ನು ಮುಗಿಸುವುದೇ ಬಹಳ ಕಷ್ಟವಾಯಿತು. ಅನೇಕ ದಿನಗಳವರೆಗೆ ಆತನಿಗೆ ಎಲ್ಲೂ ಉದ್ಯೋಗ ದೊರೆಯಲಿಲ್ಲ. ಕಡೆಗೆ ಆತನ ತಂದೆಯ ಪ್ರಭಾವದಿಂದ ಒಂದು ದೊಡ್ಡ ಅಂಗಡಿಯಲ್ಲಿ ಮಾಲೀಕನಿಗೆ ಸಹಾಯ ಮಾಡುವ ಕೆಲಸ ದೊರೆಯಿತು. ಆದರೆ ಆತ ಅಲ್ಲೂ ಹೆಚ್ಚು ಕಾಲ ಮುಂದುವರಿಯಲು ಆಗಲಿಲ್ಲ. ತನ್ನದೇ ಸ್ವಂತ ಬಿಸಿನೆಸ್ ಪ್ರಾರಂಭಿಸುವುದಾಗಿ ಹೇಳಿದಾಗ ತಂದೆ ಇದಕ್ಕೆ ಒಪ್ಪಿ ಹಣ ಸಹಾಯವನ್ನೂ ಮಾಡಿದರು. ಆದರೆ ದುರದೃಷ್ಟವಶಾತ್ ಮಿಸ್ಟರ್ `ಪಿ' ಬಿಸಿನೆಸ್‌ನಲ್ಲಿ ಭಾರೀ ನಷ್ಟ ಅನುಭವಿಸಬೇಕಾಗಿ ಬಂತು. ತಾನು ``ಯಾವುದಕ್ಕೂ ಉಪಯೋಗವಿಲ್ಲದವ'' ಎಂಬ ಭಾವನೆ ಅವನಲ್ಲಿ ಸೃಷ್ಟಿಯಾಯಿತು. ಕುಟುಂಬದ ಅತ್ಯಂತ ಹಿರಿಯ ಸದಸ್ಯನಾಗಿ ಅವನಿಂದ ಕುಟುಂಬಕ್ಕೆ ಯಾವ ಪ್ರಯೋಜನವೂ ಇರಲಿಲ್ಲ. ಆತನಿಗೆ ತಂದೆಯ ಎದುರು ನಿಲ್ಲಲು ಸಾಧ್ಯವಾಗಲಿಲ್ಲ. ಯಾರತ್ತಲೂ ನೋಡುವ ಧೈರ್ಯವಿಲ್ಲದೆ ಕ್ರಮೇಣ ಎಲ್ಲರ ಕಣ್ಣು ತಪ್ಪಿಸಲು ಪ್ರಾರಂಭಿಸಿದ. ನಿಧಾನವಾಗಿ ಆತನ ಕುತ್ತಿಗೆಯ ಸ್ನಾಯುವಿನಲ್ಲಿ ಸೆಡೆತ ಉಂಟಾಗಿ `ಟಾರ್ಟಿಕಾಲಿಸ್' ವ್ಯಾಧಿಗೆ ಒಳಗಾದ.

ಈ ಮುಂಚಿನ ಅಧ್ಯಾಯಗಳಲ್ಲಿ ವಿವರಿಸಿದಂತೆ `ಡಿ ಸೆನ್ಸಿಟೈಸೇಷನ್' ತಂತ್ರದ ಸಹಾಯದಿಂದ ಶ್ರೀಮತಿ `ಕ್ಯು' ಮತ್ತು ಶ್ರೀ `ಪಿ' ಅವರನ್ನು ಗುಣಪಡಿಸಲಾಯಿತು.

ಇಲ್ಲಿ ಒಂದು ಮಾತನ್ನು ನೆನಪಿಡಬೇಕು. ಸಾಮಾನ್ಯವಾಗಿ ಕೆಲವು ಬಾರಿ ಚಿಕಿತ್ಸೆಯ ನಂತರ ರೋಗಿಗಳ ಪರಿಸ್ಥಿತಿ ಉತ್ತಮಗೊಂಡು ಚಿಕಿತ್ಸೆಯನ್ನು ನಿಲ್ಲಿಸಿ ಬಿಡುತ್ತಾರೆ. ಅದು ಒಳ್ಳೆಯದಲ್ಲ. ವ್ಯಾಧಿ ಶಾಶ್ವತವಾಗಿ ಗುಣವಾಗಬೇಕಾದರೆ ಗುಣವಾದ ನಂತರ ಆರೋಗ್ಯವನ್ನು ಬಲಪಡಿಸುವ ಕೆಲವು ಚಿಕಿತ್ಸೆಗಳನ್ನು ತೆಗೆದು ಕೊಳ್ಳುವುದು ಒಳ್ಳೆಯದು.

ಇನ್ನೊಬ್ಬ ರೋಗಿ ಮಿಸ್ `ಆರ್' ಮಾನಸಿಕ ಹಾಗೂ ದೈಹಿಕ ಬಳಲಿಕೆಯಿಂದ ನರಳುತ್ತಿದ್ದಳು. ಇದರ ನಂತರ ತೀವ್ರ ಅಸ್ವಸ್ಥತೆ ಉಂಟಾಗಿ ಗಮನವನ್ನು ಕೇಂದ್ರೀಕರಿಸಲು ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ಇದು ಸಾಕಷ್ಟು ಆತಂಕ ಉಂಟು ಮಾಡಿತು. ಹಾಗಾಗಿ ಆಕೆಗೆ ಆಫೀಸ್ ಕೆಲಸಗಳನ್ನು ನಿಭಾಯಿಸಲು ಸಾಧ್ಯವಾಗುತ್ತಿರಲಿಲ್ಲ. ಆಕೆ ಇನ್ನೂ ಚಿಂತಾಗ್ರಸ್ತಳಾದಳು. ಅದು ಆಕೆಯ ನರಗಳ ಒತ್ತಡವನ್ನು ಹೆಚ್ಚಿಸಿತು. ಆಕೆಯ ಬೆನ್ನು ಮೂಳೆಯ ಬುಡದ ನರಗಳ ಒತ್ತಡದಿಂದ ಪಿರ್ರೆಯಲ್ಲಿ ನೋವು ಹಾಗೂ ಸೊಂಟದಿಂದ ಕಾಲುಗಳವರೆಗೆ ಒಂದು ಬಗೆಯ ನೋವು ಉಂಟಾಗುತ್ತಿರುವುದಾಗಿ ಆಕೆ ದೂರಿದಳು. ರಿಲ್ಯಾಕ್ಸೇಷನ್ ಹಾಗೂ ನರಗಳ ಒತ್ತಡ ಕಡಿಮೆಯಾಗುವ ಹಾಗೂ ಶಕ್ತಿ ಹೆಚ್ಚುವ ಬಗ್ಗೆ ಆಕೆಗೆ ಸಂಮೋಹಿನಿಯಲ್ಲಿ ಸೂಚನೆಗಳನ್ನು ನೀಡಲಾಯಿತು. ವಾರ ಬಿಟ್ಟು ವಾರದಂತೆ ಹತ್ತು ಸಂಮೋಹಿನಿ ಅಧಿವೇಶನಗಳ ನಂತರ ದೈಹಿಕವಾಗಿ ಹಾಗೂ ಮಾನಸಿಕವಾಗಿ ಬಹಳಷ್ಟು ಸುಧಾರಣೆಯಾಗಿರುವುದಾಗಿ ಆಕೆ ವರದಿ ಮಾಡಿದಳು ಮತ್ತು ತನ್ನ ಕೆಲಸಗಳನ್ನು ನಿಭಾಯಿಸುವ ಬಗ್ಗೆ ಆತ್ಮವಿಶ್ವಾಸವನ್ನು ಆಕೆ ಪ್ರಕಟಿಸಿದಳು.

ಆಂಗ್ಸೈಟಿ ಹಿಸ್ಟೀರಿಯಾದ ಕೆಲವು ಪ್ರಕರಣಗಳೂ ನಮ್ಮಲ್ಲಿ ಇವೆ. ಅಂಥ ಒಬ್ಬ ರೋಗಿ ಶ್ರೀ `ಟಿ'. ಆತ `ಬರೆಹಗಾರರ ಸೆಡೆತ' (ರೈಟರ್ಸ್ ಕ್ರಾಂಪ್)ದಿಂದ ನರಳುತ್ತಿದ್ದರು. ಆತ ಮಧ್ಯ ವಯಸ್ಕ. ಆತನ ಮುಖ್ಯ ಸಮಸ್ಯೆಯೆಂದರೆ ಐದು ವರ್ಷಗಳಿಂದ ಆತನಿಗೆ ಬರೆಯಲು ಆಗುತ್ತಿರಲಿಲ್ಲ. ಆತ ತನ್ನ ಕಾಲೇಜಿನ ಪ್ರಿನ್ಸಿಪಾಲ್ ಆದ ನಂತರ ಚೆಕ್‌ಗಳಿಗೆ ಸಹಿ ಹಾಕಲಾರಂಭಿಸಿದಾಗ ಈ ತೊಂದರೆ ಪ್ರಾರಂಭವಾಯಿತು. ಬಹಳ ವರ್ಷಗಳ ವರೆಗೆ ತನಗೆ ಪ್ರಿನ್ಸಿಪಾಲ್ ಹುದ್ದೆ

ದೊರೆಯಬೇಕಾಗಿತ್ತೆಂದೂ ತನ್ನ ಸೀನಿಯಾರಿಟಿಯನ್ನು ಕಡೆಗಣಿಸಲಾಗಿತ್ತೆಂದೂ ಅವರ ಮನಸ್ಸಿನಲ್ಲಿ ಕೊರಗು ಇತ್ತು. ಇದರಿಂದಾಗಿ ಈ ಮಧ್ಯೆ ಆತ ಕೀಳರಿಮೆ ಬೆಳೆಸಿಕೊಂಡು ಬಹುಬೇಗ ಸಹನೆ ಕಳೆದು ಕೊಳ್ಳುತ್ತಿದ್ದರು. ಆದರೆ ವಾಸ್ತವವಾಗಿ ಆತನಿಗೆ ಪ್ರಿನ್ಸಿಪಾಲ್ ಹುದ್ದೆ ದೊರೆತಾಗ `ಏನಾದರೂ ತಪ್ಪು ಆದರೆ ತನಗೆ ಏನಾಗಬಹುದು' ಎಂಬ ಭೀತಿ ಅವರಲ್ಲಿ ಉಂಟಾಯಿತು. ಕೋರ್ಟು ಸೀನ್‌ಗಳು ಮತ್ತು ಶಿಕ್ಷೆಗಳ ದೃಶ್ಯಗಳು ಕಣ್ಣು ಮುಂದೆ ಮೂಡಿ ಅವರ ಮನಸ್ಸನ್ನು ಬಾಧಿಸತೊಡಗಿದವು. ಪ್ರಾಸಂಗಿಕವಾಗಿ ಅವರಲ್ಲಿ ಬರೆಯುವ ಅಪೇಕ್ಷೆಯೇ ಇಲ್ಲದಂತಾಯಿತು. ಈ ಬಗೆಯ ಮುನಿಸು ಮತ್ತು ಭೀತಿಯ ಪರಿಣಾಮವಾಗಿ ಅವರಲ್ಲಿ ಭೀತಿ ದಾಳಿ ಮಾಡಲಾರಂಭಿಸಿ ಅವರು ಬರೆಯಲು ಪ್ರಯತ್ನಿಸಿದಾಗಲೆಲ್ಲ ಅವರಕೈ ಸೆಡೆತಕ್ಕೆ ಒಳಗಾಗುತ್ತಿತ್ತು. ಗುಣವಾಗಬೇಕೆಂಬ ತೀವ್ರ ಆತಂಕದ ಕಾರಣವಾಗಿ ಸಂಮೋಹಿನಿ ಚಿಕಿತ್ಸೆಗೆ ಅಷ್ಟು ಸರಿಯಾದ ರೋಗಿಯಲ್ಲ ಎಂದು ತೋರಿತು. ಆದರೆ ಪ್ರಾರಂಭದಲ್ಲಿ ವಾರಕ್ಕೆ ಎರಡು ಬಾರಿ ಮತ್ತು ಅನಂತರ ವಾರಕ್ಕೆ ಒಂದು ಬಾರಿಯಂತೆ 15 ಅಧಿವೇಶನಗಳ ನಂತರ ಆತನಿಗೆ ಮೀಡಿಯಂ ಟ್ರಾನ್ಸ್‌ಗೆ ಒಳಗಾಗಲು ಸಾಧ್ಯವಾಯಿತು. ಅನಂತರ ಬಹು ಬೇಗ ಆತನಲ್ಲಿ ತ್ವರಿತ ಸುಧಾರಣೆ ಕಂಡು ಬಂತು.

ಈಗ ಆತ ಯಾವುದೇ ಕಷ್ಟವಿಲ್ಲದೆ ಹಲವು ಪುಟಗಳಷ್ಟು ಬರೆಯಬಲ್ಲರು.

ಇಲ್ಲಿ ಕೆಲವು ವಿವರಣೆಗಳನ್ನು ನೋಡೋಣ. ಅದು ಓದುಗರಿಗೆ ಕೆಲವು ವಿಷಯಗಳನ್ನು ಸ್ಪಷ್ಟಪಡಿಸುವುದು:

ನಪಗಳ ಕ್ಷೋಭೆಯೊಂದಿಗೆ ಕಾಣಿಸಿಕೊಳ್ಳುವ ಶಾರೀರಿಕ ಚಿಹ್ನೆಗಳನ್ನು ಉಂಟು ಮಾಡುವಲ್ಲಿ ಸ್ವತಂತ್ರ ನರ ವ್ಯವಸ್ಥೆಯ ಪ್ರಭಾವ

ಅಪಾಯ
(ನಿಜವಾದ ಅಥವಾ ಊಹಾತ್ಮಕ)
ಭೀತಿಗೆ ದಾರಿ ಮಾಡುವುದು.

ಸ್ವತಂತ್ರ ನರ ವ್ಯವಸ್ಥೆಗೆ ಸಂದೇಶ: ``ಎಚ್ಚರಿಕೆಯಿಂದ ನೋಡಿ! ಅಪಾಯ! ಹೋರಾಡಲು ಅಥವಾ ಓಡಿ ಹೋಗಲು ಸಿದ್ಧರಾಗಿ!"

## ಮಿದುಳು

ಈ ಶಾರೀರಿಕ ಸಂವೇದನೆಗಳನ್ನು ಮಿದುಳಿಗೆ ಹಿಂದಿರುಗಿಸಿದಾಗ ಸಾಮಾನ್ಯವಾಗಿ ಹೆಚ್ಚು ಭೀತಿ ಮತ್ತು ಆತಂಕ ಉಂಟು ಮಾಡಿ ಮತ್ತಷ್ಟು ಚಿಹ್ನೆಗಳನ್ನು ಸೃಷ್ಟಿಸುತ್ತವೆ. ಹೀಗೆ ಒಂದು ವಿಷವರ್ತುಲ ಸೃಷ್ಟಿಯಾಗುತ್ತದೆ.

ಸ್ವತಂತ್ರ ನರ ವ್ಯವಸ್ಥೆ
- ಕೂದಲು ನಿಮಿರಿ ನಿಲ್ಲುತ್ತದೆ
- ಕಣ್ಣಿನ ಪಾಪೆಗಳು ಹಿಗ್ಗುತ್ತವೆ
- ಚರ್ಮ ಬೆವರುತ್ತದೆ
- ಬಾಯಿ ಒಣಗುತ್ತದೆ
- ಹೃದಯ ಬಡಿತ ತ್ವರಿತಗೊಳ್ಳುತ್ತದೆ. ಹೊಡೆದುಕೊಳ್ಳುತ್ತದೆ.

ಈ ವ್ಯವಸ್ಥೆಯು ಶರೀರದ ಎಲ್ಲ ಅಂಗಗಳು ಮತ್ತು ಗ್ರಂಥಿಗಳನ್ನು ಸ್ವತಶ್ಚಲಿಯಾಗಿ ನಿಯಂತ್ರಿಸುತ್ತದೆ.
- ಶ್ವಾಸಕೋಶಗಳು ತ್ವರಿತವಾಗಿ ಉಸಿರಾಡುತ್ತವೆ
- ರಕ್ತದ ಒತ್ತಡ ತ್ವರಿತವಾಗಿ ಹೆಚ್ಚುತ್ತದೆ
- ಜೀರ್ಣಕ್ರಿಯೆ ನಿಲ್ಲುತ್ತದೆ
- ಕರುಳಿಗೆ ಆಯಾಸದ ಭಾವನೆ ಉಂಟಾಗುತ್ತದೆ.

ಮೂತ್ರ ಕೋಶ ಮತ್ತು ಲೈಂಗಿಕ ತೊಂದರೆಗಳು

ಸಾಧಾರಣವಾಗಿ ಇದು ಪರಿಪೂರ್ಣ ಸಮತೋಲನದಿಂದಿಯತ್ತದೆ. ಉದಾಹರಣೆಗೆ ಒಂದು ಭಾಗವು ಹೃದಯ ಬಡಿತ ತ್ವರಿತವಾಗುವಂತೆ ಮಾಡುತ್ತದೆ. ಇನ್ನೊಂದು ಭಾಗ ನಿಧಾನ ಮಾಡುತ್ತದೆ.

ಅಪಾಯಕ್ಕೆ
(ನಿಜವಾದ ಅಥವಾ ಊಹಾತ್ಮಕ)
ಪ್ರತಿಕ್ರಿಯೆಯಾಗಿ ಸಂಭವಿಸುವ ಕೆಲವು ವಿಶಿಷ್ಟ ಶಾರೀರಿಕ ಚಿಹ್ನೆಗಳು.

ಇದು ಈ ಸಮತೋಲನವನ್ನು ತಲೆ ಕೆಳಗು ಮಾಡಬಲ್ಲ ಭಾವಾವೇಶಗಳ ಪ್ರಭಾವದಲ್ಲಿರುತ್ತದೆ ಮತ್ತು ಚಿಹ್ನೆಗಳನ್ನು ಉಂಟು ಮಾಡುತ್ತದೆ.

### ಕುವೆಂಪು

ಬರಹ
ಇಂಪು
ವಿಚಾರ
ಕೆಂಪು
ಹೃದಯ
ತಂಪು.

### ಕಾರಂತ

ಕಾರಂತರ
ಕಾದಂಬರಿ
ಕಟುಂಬರಿ ಅಲ್ಲ
ಗಟ್ಟಿ
ಕೋರಿ (ಕೋಳಿ)
ರೊಟ್ಟಿ

---

### ಬೀchi

ಪಾತ್ರಗಳಿಗೆ
`ಟೂ ಪೀಸ್'
ಉಡಿಸಿ
ಓದುಗರನ್ನು
ಬಟ್ಟಬಯಲು
ಮಾಡುವ ಜಾದೂಗಾರ.

—ಗೋಪಾಲ ತ್ರಾಸಿ

## ಆಧ್ಯಾತ್ಮ ಜೀವನದ ಚೆಲುವು

(ಪುಟ 7ರಿಂದ)

ನೆಲೆಯಲ್ಲಿ ಸ್ಥಿರವಾಗಬಹುದು, ಸಧ್ಯದಲ್ಲಿ - ವರ್ತಮಾನದಲ್ಲಿ ಪೂರ್ಣವಾಗಿ ಬದುಕಬಹುದು. ಪ್ರತಿಕ್ಷಣವೂ ಹೊಸ ಚೆಲುವನ್ನು, ಹೊಸ ಪೂರ್ಣತೆಯನ್ನು ತಂದು ಕೊಡುತ್ತದೆ.

ಹೀಗೆ ಆತ್ಮ ವಿಚಾರಕ್ಕೆ ಪ್ರಥಮ ಆದ್ಯತೆ ಅಗತ್ಯವಾದರೂ, ಗೌರವದ ಸ್ಥಾನ ದೊರಕಬೇಕಿದ್ದರೂ ಆಧ್ಯಾತ್ಮ ಸಾಧಕರು ತಮ್ಮದೇ ಪೂರ್ವಗ್ರಹ, ಸಂಸ್ಕಾರಗಳಿಂದ, ಆತ್ಮವಿಚಾರದಿಂದ ದೂರಸರಿದು ಬಿಡುತ್ತಾರೆ. ಕೆಲವರಿಗೆ ಲೋಕೋಪಕಾರದ ಉನ್ನತ ಭ್ರಮೆ. ನಿಜ, ಪ್ರಶಂಸಾರ್ಹವಾದದ್ದೇ - ಆದರೆ ಪ್ರಥಮ ಅಗತ್ಯ ಯಾವುದಕ್ಕೋ ಅದಕ್ಕೇ ದೊರೆಯಬೇಕು. ಒಬ್ಬ ಸಾಧಕ ರಮಣರೊಡನೆ ನಡೆಸಿದ ಸಂಭಾಷಣೆ ಈ ಅಂಶದ ಮಹತ್ವವನ್ನು ಬೆಳಗುತ್ತದೆ.

ಸಾಧಕ - ಜಗತ್ತಿನ ಜನಗಳ ಸಂಕಟವನ್ನು ನೋಡಿದಾಗಲೆಲ್ಲ, ನನಗೆ ಸಾಧ್ಯವಾದಷ್ಟು ಏನಾದರೂ ಮಾಡಬೇಕು ಎನಿಸುತ್ತದೆ.

ರಮಣ - ನಿನ್ನನ್ನೇ ನೀನು ಅರಿಯದೆ ಉಳಿದವರಿಗೆ ಹೇಗೆ ಸಹಾಯಮಾಡಬಲ್ಲೆ? ಮೊದಲು ನಿನ್ನ ಮನೆಯನ್ನು ಸರಿಪಡಿಸಿಕೋ. ನೀನು ನಿಜವಾಗಿ ಯಾರು ಎಂಬುದನ್ನು ಅರಿಯಲು ಯತ್ನಿಸು. ಈಗ ನನ್ನೆದುರು ಕುಳಿತಿರುವ ದೇಹವೇ ನೀನೋ? ಬೇರೆಯವರಿಗೆ ಸಹಾಯ ಮಾಡಲು ಯತ್ನಿಸುವ ಮೊದಲು ನೀನು ಯಾರೂ ಎಂಬುದನ್ನು ತಿಳಿ.

ಆತ್ಮನಿರೀಕ್ಷೆಯಿಂದ ಆತ್ಮಜ್ಞಾನವು ಉದಿಸಿದಾಗ ಏನು ಸಂಭವಿಸುತ್ತದೆ? ಎಂದರೆ ಒಂದು ಹೊಸ ದೃಷ್ಟಿ ಉಂಟಾಗುತ್ತದೆ. ನಿಮ್ಮಲ್ಲಿ ನೀವು ಶಾಂತರಾಗುವಿರಿ. ಆನಂದದಿಂದ ತುಂಬಿ ಹೋಗುವಿರಿ. ಅದನ್ನೇ ನಿಮ್ಮ ಸುತ್ತೆಲ್ಲ ಹರಡುವಿರಿ. ಈ ಸಹಜ ಆನಂದವಿಲ್ಲದಿದ್ದರೆ, ಪರರಿಗೆ ಸಹಾಯ ಮುಂತಾದ ಭಾವನೆಗಳು, ಹೆಳವನೊಬ್ಬ ತನಗೆ ಯಾರಾದರೂ ಕಾಲುಗಳನ್ನು ಕೊಟ್ಟರೆ ಸಾಕು, ಶತ್ರುಗಳನ್ನು ಸದೆ ಬಡಿಯಬಲ್ಲೆ ಎಂದು ಜಂಬ ಕೊಚ್ಚಿದಂತಾಗುತ್ತದೆ.

ರಮಣರು ನಮ್ಮ ಗಮನವನ್ನು ಯಾವಾಗಲೂ ನಮಗೆ ಪರಿಚಿತವಾದ, ನಾವು ತಿಳಿದುದರ ಬಗೆಗೇ ಸೆಳೆಯುತ್ತಾರೆ. ಮನಸ್ಸಿಗೆ ಯಾವಾಗಲೂ ತನಗೆ ತಿಳಿಯದುದನ್ನೇ ತಿಳಿಯಲು ಬಯಸುವ ಅಭ್ಯಾಸ, ಪ್ರಾರಬ್ಧ, ಪುರುಷಕಾರ, ಪುನರ್ಜನ್ಮ, ಭೂತಕಾಲ, ಮುಂತಾದ ಸಂಗತಿಗಳತ್ತಲೇ ನಮ್ಮ ಕಾಳಜಿ. ಈಶ್ವರನ ಬಗೆಗೂ ನಮ್ಮಲ್ಲಿ ಅದೆಷ್ಟೋ ಕಲ್ಪನೆಗಳು - ಆತನನ್ನು ಕಾಣುವ ಬಗ್ಗೆ, ದರ್ಶನಗಳ ಬಗೆಗೆ. ರಮಣರೆನ್ನುತ್ತಾರೆ

- ``ದೇವರನ್ನು, ಆತನ ಕೆಲಸಗಳನ್ನು ಅರಿಯುವ ಮೊದಲು, ನಿನ್ನನ್ನು ನೀನು ಅರಿಯುವುದು ಮುಖ್ಯ. ಅನಂತರವೇ ಎಲ್ಲವನ್ನೂ ನೀನು ತಿಳಿಯಬಹುದು". ಅಥವಾ ಅವರು ಹೀಗೆನ್ನುತ್ತಾರೆ. ``ತಿಳಿಯದ ಸಂಗತಿಗಳನ್ನೇ ತಿಳಿಯಲು ಹೊರಟಿದ್ದೇವೆ, ಆತ್ಮಜ್ಞಾನಕ್ಕೆ ಆಗತ್ಯವಾದದ್ದು ಆಗಲೇ ನಮಗೆ ಕರಗತವಾಗಿದೆ. ಏಕೆ? ನಾನು ಎಂಬುದಕ್ಕಿಂತ ಆತ್ಮೀಯವಾದದ್ದು ಬೇರೆ ಯಾವುದೂ ಇಲ್ಲ, ಏಕೆಂದರೆ ಸಮಸ್ತ ಬದುಕೂ ಅದರ ಸುತ್ತಲೇ ಸುತ್ತುತ್ತದೆ".

ಧ್ಯಾನದ ಸಮಯ, ಅವಧಿ, ಎಷ್ಟು ಬಾರಿ ಧ್ಯಾನ? ಯಾವ ವೇಳೆ? ಸೂಕ್ತವಾದ ಆಸನ. ಪದ್ಮಾಸನ. ಸ್ಥಿರಾಸನ ಇತ್ಯಾದಿ, ಕಣ್ಣು ತೆರೆದು ಧ್ಯಾನವೇ, ಕಣ್ಣು ಮುಚ್ಚಿಯೆ? ಮುಂತಾದ ಪ್ರಶ್ನೆಗಳಿಗೆ ಖಂಡಿತ ಬೆಲೆಯಿದೆ. ಆದರೆ ಆತ್ಮ ನಿರೀಕ್ಷಣೆಗೆ ಗಾಢವಾಗಿ ತೊಡಗಿದಾಗ, ಈ ಎಲ್ಲ ಪ್ರಶ್ನೆಗಳೂ ಕಳಚಿ ಹೋಗುತ್ತವೆ. ಆಗ ಧ್ಯಾನವು ನಿರ್ದಿಷ್ಟ ವೇಳೆಯ ಕ್ರಿಯೆಯಾಗಿ ಉಳಿಯುವುದಿಲ್ಲ. ಸಾಧ್ಯವಾದಾಗಲೆಲ್ಲ ಅದನ್ನು ಅಭ್ಯಾಸ ಮಾಡಬಹುದು - ಉಸಿರಾಡಿದಷ್ಟು ಸಹಜವಾಗಿ. ರೈಲು ಅಥವಾ ಬಸ್ಸಿನಲ್ಲಿ ಪ್ರಯಾಣಿಸುತ್ತಿರುವಾಗ, ರೈಲಿನಲ್ಲಿ ಹಿಡಿಗೆ ಜೋತು ಬಿದ್ದಿರುವಾಗಲೂ, ಟಿ.ವಿ. ನೋಡುತ್ತಿರುವಾಗಲೂ, ಆರಾಮ ಕುರ್ಚಿಯಲ್ಲಿ ಕುಳಿತಿರುವಾಗಲೂ, ಎಚ್ಚರದಲ್ಲೂ, ಹಾಸಿಗೆ ಮೇಲೆ ಮಲಗಿದ್ದಾಗಲೂ. ಆತ್ಮಚಿಂತನೆ ಸಾಧ್ಯವಾದುದರಿಂದ, ಆಸನಗಳ ಪ್ರಾಮುಖ್ಯತೆ ಉಳಿಯುವುದೇ ಇಲ್ಲ. ಮನಸ್ಸು ಅಂತರ್ಮುಖಿವಾಗಿದ್ದಾಗ, ಕಣ್ಣುಗಳನ್ನು ತೆರೆದಿದ್ದರೂ ಸರಿಯೇ, ಮುಚ್ಚಿದ್ದರೂ ಸರಿಯೇ, ರಮಣರು ಹೇಳುವಂತೆ - ``ಕಿಟಕಿಯ ಆಚೆ ನೀವು ನೋಡದಿದ್ದರೆ ಅದು ಮುಚ್ಚಿರಲಿ, ತೆರೆದಿರಲಿ, ನಿಮಗೇನು?"

ಆತ್ಮ ವಿಚಾರವನ್ನು ಅದರ ಅಂತ್ಯದವರೆಗೂ ತೆಗೆದುಕೊಂಡು ಹೋದಾಗ, ಹಾದಿಯಲ್ಲಿನ ದೊಡ್ಡ ಕಂಟಕವೆಂದರೆ ನಮ್ಮ ವ್ಯಕ್ತಿತ್ವ ಎಂಬುದನ್ನು ಕಳೆದುಕೊಳ್ಳುವ ಭಯ. ಪಾಲ್ ಬ್ರಂಟನ್ ಮತ್ತು ಇತರ ಕೆಲವರು ಈ ಭಯವನ್ನು ವ್ಯಕ್ತಪಡಿಸಿದ್ದಾರೆ. ನಿಜವಾಗಿ ಏನಾಗುತ್ತದೆ ಎಂದರೆ ``ನಿಮ್ಮನ್ನು ನೀವು ಕಂಡು ಕೊಳ್ಳುತ್ತೀರಿ - ನಿಜವಾಗಿ. ಏಕೆಂದರೆ ನೀವು ಪರಿಮಿತ ವ್ಯಕ್ತಿತ್ವ ಉಳ್ಳವರಾಗಿ ಉಳಿಯುವುದಿಲ್ಲ. ಪ್ರಜ್ಞೆಯ ಪೂರ್ಣತೆಯೇ ನೀವು. ಬರಿಯ ಒಂದು ಅಲೆಯಲ್ಲ, ಸಮುದ್ರವೇ ನೀವು. ಅದರ ವಿಸ್ತಾರ, ಗಾಂಭೀರ್ಯ, ಶಕ್ತಿ, ಎಲ್ಲವನ್ನೂ ಒಳಗೊಂಡಂತೆ, ಎಂಬುದನ್ನು ಕಂಡುಕೊಳ್ಳುತ್ತೀರಿ.

[ಗುಪ್ತಶಕ್ತಿ - ರಮಣ ಮಹರ್ಷಿ ಮಾರ್ಗದ ಕೃಪೆಯಿಂದ]

# DEVELOPMENTS IN COMMUNICATIONS

**Cellular Communications**

Cellular telephony is a wireless based technology that full featured telephones services to people on the move without any restrictions except geographic ones like the reach of the service that they subscribe to This reach can be a city as it will be in the case of India, or the entire globe as and when projects such as Iridium and Teledisc are implemented. The fact that cellular technology is here to stay is evident from the number of people using such services globally and the growth patterns over the recent years. The number of people using such services globally and the growth patterns over the recent years. The number of cellular subscriber increases at a rate of 54% annually. The average subscriber gets a handset and other optional add-ons. The costs of subscribing to cellular service in India at the time of its recent introduction was above Rs. 30,000 for the handset, Rs. 8.40 for a minute of air-time depending on whether the call is incoming or outgoing in addition to the normal telephone billing for all calls made and a one time set-up fee of Rs. 1,200. The charges for air-time being quite high will make will make people thing twice before giving out their cellular numbers freely or before indulging in long conversations, thereby making the cellular phone an instrument whose purposes are totally decided by the priority level of the communication taking place.

Past attempts to create economically viable mobile communications were seriously hampered by the limited bandwidth available. The great advantage of cellular radio over forms of HF, VHF or FM Radio communications is that a large number of users can share a limited band of frequencies in a relatively small geographic area. To use a cellular radio, the large geographic area is subdivided into smaller areas called 'Cells'. Each cell has a base station that transmits to and receives form all the mobile phones within the cell. Generally, the more the number of users, the smaller are the cells. Since each base station must be in the line of sight of other base stations, topology of any rural area decides its cell size. The maximum size. Of the cell is regulated by the need to keep the signals transmitted by the signals transmitted by the various base stations free of mutual interference.

Cellular radio uses low UHF transmitters that have a small and predictable transmission radius. This means that within a short distance from the first transmission, the same channel can be used by another user. Most cellular systems operate at frequencies of either 400 to 500 MHz. or 800 to 999 MHz. Due to the short wavelength and low power transmissions of the system, physical like buildings and tunnels can be penetrated and more users can be accommodated in a limited geographic area.

As the mobile communications user movers from one cell to another, he or she must be assigned another voice frequency so quickly that the call is not interrupted as the frequencies change. This process takes place in a third of a second and is called 'hand-off'. As a mobile user to the outer region of his or her cell, the base station alerts the nearest mobile use gets closer ti the outer region of his or her cell, the base station alerts the nearest mobile switching center and informs it about the event. The switching center decides which is the best available signal from the nearest base station and the new base station now sends a signal to the mobile phone over the signalling channel telling it to tune in to the new frequency and the hand-off occurs.

Cellular technology has come a long way from its developmental stage and is ready to storm the Indian scene. The Success of the service and its growth rate will depend on the availability, cost, reliability and the reach of the system.

*(Compiled from Various sources by* ***Chetan Prasad****)*

Regn. No. 040015/86
Regn. No. MH/By/NE121/95

# 'ಅವ್ಯಕ್ತ'ದ ಒಂದು ಸಂಜೆ

● ಗಿರಿಜಾ ಶಾಸ್ತ್ರಿ

"ಮನುಷ್ಯ ಜೀವನದಲ್ಲಿ ಘಟಿಸುವ ಅನೇಕ ಸಂಗತಿಗಳಿಗೆ ಅವ್ಯಕ್ತವಾದ ಕಾರ್ಯ ಕಾರಣ ಸಂಬಂಧವಿದೆಯೆನಿಸುತ್ತದೆ. ಹೀಗೆ ಹೊರನೋಟಕ್ಕೆ ಅರಿವಿಗೆ ಬಾರದ ಅಮೂರ್ತ ಸಂಗತಿಗಳ ಶೋಧನೆಯೇ 'ಅವ್ಯಕ್ತ' ಕಾದಂಬರಿಯ ಪ್ರಮುಖ ಆಶಯವಾಗಿದೆ" ಎಂದು 'ಅವ್ಯಕ್ತ' ಕಾದಂಬರಿಯ ಲೇಖಕಿ ಶ್ರೀಮತಿ ತಾರಾ ಭಟ್ ಅವರು ಇತ್ತೀಚೆಗೆ ಡೊಂಬಿವಲಿ 'ಅನುಜಾ ಮಹಿಳಾ ಸಂಘ'ವು ಏರ್ಪಡಿಸಿದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ತಮ್ಮ ಕಾದಂಬರಿಯ ಪ್ರೇರಣೆ ಹಾಗೂ ಹಿನ್ನೆಲೆಗಳ ಬಗೆಗೆ ಬೆಳಕು ಚೆಲ್ಲಿದರು.

ವೈದಿಕ ಮನೆತನದಿಂದ ಬಂದ ಅವರು, ಆರ್ಥಿಕ ಕೊರತೆಗಳ ಕಾರಣಕ್ಕಾಗಿಯೇ ಶೋಷಣೆಗೆ ಒಳಗಾಗುವ ಬ್ರಾಹ್ಮಣ ವರ್ಗದ ಹೋರಾಟದ ಇನ್ನೊಂದು ಮುಖವನ್ನು ತಮ್ಮ ವೈಯಕ್ತಿಕ ಅನುಭವಗಳ ಮೂಲಕ ಸ್ಪಷ್ಟ ಪಡಿಸಿದರು. ಅಂತಹ ವೈಯಕ್ತಿಕ ಹೋರಾಟವೇ ಆ ಕಾದಂಬರಿಯ ಪ್ರೇರಣೆಯಾದುದನ್ನೂ ತಿಳಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಮಹಿಳೆಯರು ಬಹಳ ಹುರುಪಿನಿಂದ ಚರ್ಚೆಯಲ್ಲಿ ಪಾಲ್ಗೊಂಡರು. ಕಾದಂಬರಿಕಾರ್ತಿಯ ವೈಯಕ್ತಿಕ ನಂಬಿಕೆಗಳಿಗೂ, ಕಾದಂಬರಿಯ ಆಶಯಗಳಿಗೂ ಇರುವ ವೈರುಧ್ಯಗಳ ಬಗೆಗೆ ಸಂವಾದ ನಡೆದರೂ, ಕಾದಂಬರಿ, ಕೊನೆಗೆ ಓದುಗರಿಗೆ ಏನನ್ನು ತಲಪಿಸುತ್ತದೆ ಎನ್ನುವುದೇ ಮುಖ್ಯವಾದ್ದರಿಂದ, ಕೃತಿಕಾರ್ತಿಯನ್ನು ಮೀರಿ ಕೃತಿ ಬೆಳೆಯುವುದೇ ಒಂದು ಸೃಜನಶೀಲ ಕೃತಿಯ ಮಾನದಂಡವಾಗಿರುತ್ತದೆ. ಸಮಕಾಲೀನ ಲೇಖಕಿಯರಲ್ಲಿ ಕವಯತ್ರಿಯರೇ ಹೆಚ್ಚಿನ ಸಂಖ್ಯೆಯಲ್ಲಿರುವಾಗ, ವಿಚಾರಾತ್ಮಕ ಕಾದಂಬರಿ ರಚಿಸುತ್ತಿರುವ ತಾರಾ ಭಟ್ ಅವರು ಬೆರಳೆಣಿಕೆಯ ಕಾದಂಬರಿ ಲೇಖಕಿಯರಲ್ಲಿ ಒಬ್ಬರಾಗಿದ್ದಾರೆ ಎನ್ನುವುದೇ ಹೆಮ್ಮೆಯ ವಿಷಯ.

ಕಾರ್ಯಕ್ರಮದ ಪ್ರಾರಂಭದಲ್ಲಿ ಸುಮಾ ದ್ವಾರಕಾನಾಥ್ ಅವರು ಅತಿಥಿಗಳ ಹಾಗೂ ಅನುಜಾ ಮಹಿಳಾ ಸಂಘದ ಸದಸ್ಯೆಯರ ಪರಸ್ಪರ ಪರಿಚಯ ಮಾಡಿಸಿದರು. ಗೀತಾ ಚಂದ್ರಶೇಖರ್ ಅವರು ವಿವರವಾಗಿ ಕಾದಂಬರಿಯ ಪರಿಚಯ ಮಾಡಿಸಿದರು. ಲಕ್ಷ್ಮೀ ಜೋಶಿ, ಗೀತಾ ಚಂದ್ರಶೇಖರ್, ಶ್ರೀಮತಿ ಡಂಬಳ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡರು. ಕೊನೆಗೆ ಏರ್ಪಡಿಸಿದ ಲಘು ಉಪಹಾರ ಅನುಜಾ ಮಹಿಳಾ ಸಂಘದ ಸದಸ್ಯೆಯರ ಅಚ್ಚುಕಟ್ಟು, ಅಭಿರುಚಿ, ಹಾಗೂ ಅದರ ಮನೋಭಾವವನ್ನು ವ್ಯಕ್ತ ಪಡಿಸುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿತು.

# ಸುತ್ತ ಮುತ್ತ....

## ಮುಂಬಯಿ ಕನ್ನಡ ಸಂಘದ ವತಿಯಿಂದ ಎಚ್.ಎಸ್.ಸಿ. ಮತ್ತು ಎಸ್.ಎಸ್.ಸಿ. ನಗದು ಬಹುಮಾನ

ಮುಂಬಯಿ ಎಚ್.ಎಸ್.ಸಿ. ಬೋರ್ಡಿನ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಅತಿ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗೆ ಮತ್ತು ಎಸ್.ಎಸ್.ಸಿ.ಯಲ್ಲಿ ಕನ್ನಡ ಮಾಧ್ಯಮದಲ್ಲಿ ಬರೆದು ಅತಿ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿಗೆ ಮುಂಬಯಿ ಕನ್ನಡ ಸಂಘವು ನಗದು ಬಹುಮಾನ ಕೊಡಲು ನಿರ್ಧರಿಸಿದೆ.

ಈ ಎರಡೂ ಬಹುಮಾನಗಳನ್ನು ಮಧುಗಿರಿ ಮಠ ಶಾಂತವೀರ ಪಾರ್ವತಮ್ಮ ಸ್ಮಾರಕ ದತ್ತಿ ನಿಧಿಯಿಂದ ಪ್ರತಿ ವರ್ಷವೂ ಕೊಡಲಾಗುತ್ತಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

1996ನೆ ವರ್ಷದ ಮಾರ್ಚ್ ತಿಂಗಳಲ್ಲಿ ನಡೆದ ಪರೀಕ್ಷೆಗೆ ಕುಳಿತು ತೇರ್ಗಡೆ ಹೊಂದಿದ ಎಚ್.ಎಸ್.ಸಿ. ಮತ್ತು ಎಸ್.ಎಸ್.ಸಿ. ವಿದ್ಯಾರ್ಥಿಗಳು ತಮ್ಮ ಅಂಕ ಪಟ್ಟಿಯ ನಕಲಿನ ಮೇಲೆ ಶಾಲಾ ಮುಖ್ಯೋಪಾಧ್ಯಾಯರ ಅಥವಾ ಪ್ರಾಂಶುಪಾಲರ ಸಹಿ ಪಡೆದು ಈ ಕೆಳಗಿನ ವಿಳಾಸಕ್ಕೆ ಆಗೋಸ್ಟ್ 31ರ ಒಳಗೆ ತಲಪುವಂತೆ ಕಳುಹಿಸಿ ಕೊಡಲು ಸಂಘದ ಕಾರ್ಯದರ್ಶಿಗಳು ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಿ ಕೊಂಡಿದ್ದಾರೆ.

ವಿಳಾಸ:
ಗೌರವ ಪ್ರಧಾನ ಕಾರ್ಯದರ್ಶಿ
ಮುಂಬಯಿ ಕನ್ನಡ ಸಂಘ (ರಿ.)
2, ವೆಂಕಟೇಶ ನಿವಾಸ, ಭಾವುದಾಜಿ ರಸ್ತೆ,
ಮಾಟುಂಗ (ಮಧ್ಯ ರೈಲ್ವೆ),ಮುಂಬಯಿ-400 019
ದೂರವಾಣಿ: 409 96 96

## ಕನ್ನಡ ಸಂಘ, ಕೆ. ಜೆ. ಸೋಮಯ್ಯ ಕಾಲೇಜು

ಅಂತರ ಶಾಲಾ ಸಮೂಹ ಗಾಯನ ಸ್ಪರ್ಧೆ: ಕನ್ನಡ ಸಂಘವು ಕನ್ನಡ ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸುವುದರ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ, ಪ್ರತಿಭಾ ಬೆಳವಣಿಗೆಗೆ ಮುಕ್ತ ಅವಕಾಶಗಳನ್ನು ಕಳೆದ 29 ವರ್ಷಗಳಿಂದ ನೀಡುತ್ತಾ ಬಂದಿರುತ್ತದೆ. ಈ ವರ್ಷದ ಸೋಮೈಯಾ ಕಾಲೇಜಿನ ಕನ್ನಡ ಸಂಘದ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಆಗಸ್ಟ್ ತಿಂಗಳ ಮೂರನೆಯ ಅಥವಾ ನಾಲ್ಕನೆಯ ವಾರದಲ್ಲಿ ಜರಗಿಸುವ ವಿಚಾರವಿದೆ. ಈ ಸಂದರ್ಭದಲ್ಲಿ ಮುಂಬಯಿ ಮತ್ತು ಥಾಣೆ ಜಿಲ್ಲೆಗಳಲ್ಲಿಯ ಕನ್ನಡ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಅಭ್ಯಾಸಿಸುತ್ತಿರುವ ವಿದ್ಯಾರ್ಥಿಗಳ ಸಲುವಾಗಿ ಅಂತರ ಶಾಲಾ ಸಮೂಹ ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿದೆ. ಕಾರ್ಯಕ್ರಮದ ನಿಶ್ಚಿತ ದಿನಾಂಕವನ್ನು ಮುಂದೆ ತಿಳಿಸಲಾಗುವುದು.

ಸಮೂಹ ಗಾಯನ ತಂಡವು ಕನಿಷ್ಠ ಏಳು ವಿದ್ಯಾರ್ಥಿಗಳನ್ನೊಳಗೊಂಡಿರಬೇಕು. ಶಾಲಾ ಮುಖ್ಯಸ್ಥರು ಸಮೂಹ ಗಾಯನ ತಂಡದ ವಿದ್ಯಾರ್ಥಿಗಳ ಮತ್ತು ಮೇಲ್ವಿಚಾರಕರಾಗಿ ಬರಲಿರುವ ಶಿಕ್ಷಕರ ಹೆಸರುಗಳನ್ನು ಲಿಖಿತ ಪತ್ರದ ಮೂಲಕ ಡಾ। ಸಂಜೀವ ಶೆಟ್ಟಿ, ಕಾರ್ಯಾಧ್ಯಕ್ಷರು, ಕನ್ನಡ ಸಂಘ, ಕೆ. ಜೆ. ಸೋಮೈಯಾ ಕಾಲೇಜ್ ಆಫ್ ಆರ್ಟ್ಸ್ ಎಂಡ್ ಕಾಮರ್ಸ್, ವಿದ್ಯಾ ವಿಹಾರ (ಪೂ.), ಮುಂಬಯಿ - 400 077, ಇವರಿಗೆ ಕೂಡಲೇ ಕಳುಹಿಸಿಕೊಡಬೇಕಾಗಿ ವಿನಂತಿ. (ದೂರವಾಣಿ: 511 59 15 / 511 86 50).

ಬಹುಮಾನಗಳು ಹೀಗಿವೆ: ರೂ. 200/- (ಪ್ರಥಮ); ರೂ. 150/- (ದ್ವಿತೀಯ); ರೂ. 100/- (ತೃತೀಯ); ರೂ. 50/- (ಎರಡು ಪ್ರೋತ್ಸಾಹಕ). ವಿಜೇತರಿಗೆ ಪ್ರಮಾಣ ಪತ್ರ ಮತ್ತು ಬಹುಮಾನಗಳನ್ನು ಉದ್ಘಾಟನಾ ಸಮಾರಂಭದಂದೇ ವಿತರಿಸಲಾಗುತ್ತದೆ. ಶಾಲಾ ಮುಖ್ಯಸ್ಥರು, ಶಿಕ್ಷಕರು, ಆಡಳಿತಗಾರರು ಈ ಕಾರ್ಯಕ್ರಮಕ್ಕೆ ತುಂಬು ಹೃದಯದ ಸಹಕಾರ ನೀಡಬೇಕೆಂದು ಕನ್ನಡ ಸಂಘದ ಪರವಾಗಿ ವಿನಂತಿಸುವ.

| | |
|---|---|
| **ಮನೋಜ್ ಕೋಟ್ಯಾನ್** | **ಡಾ। ಸಂಜೀವ ಶೆಟ್ಟಿ** |
| ಕಾರ್ಯದರ್ಶಿ | ಕಾರ್ಯಾಧ್ಯಕ್ಷ |

## ಪುಸ್ತಕ ಬಿಡುಗಡೆ

ಜುಲೈ 11 ರಂದು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಅವರ ಹೊಸ ಪ್ರಕಾಶನವಾದ ಡಾ. ಜಿ. ಡಿ. ಜೋಶಿಯವರ "ಹುಯಿಲಗೋಳ ನಾರಾಯಣರಾಯರು" ಎಂಬ ಕೃತಿಯ ಬಿಡುಗಡೆಯ ಸಮಾರಂಭವನ್ನು ಏರ್ಪಡಿಸಿತ್ತು. ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ. ಆರ್. ಸಿ. ಹಿರೇಮಠ್ ಅವರು ಈ ಕೃತಿಯನ್ನು ಬಿಡುಗಡೆ ಮಾಡಿದರು. ಈ ಕೃತಿಯ ಡಾ. ಜಿ. ಡಿ. ಜೋಶಿಯವರು ತಮ್ಮ ಪಿ.ಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ ಪ್ರಬಂಧ.

### ಅರ್ಥವಾಗುವುದಿಲ್ಲ

ಚುನಾವಣೆಗಳಲ್ಲೆಲ್ಲ ಪಕ್ಷ
ಸೋಲುತ್ತವೆ ಗೆಲ್ಲುತ್ತವೆ
ಪುಡಾರಿ ಸೋಲುವುದಿಲ್ಲವಲ್ಲ
ಗೆದ್ದೂ ಸೋಲುವ ಬಡ ಮತದಾರನ ಬವಣೆ

Edited, Printed & Published by M.A.N. Prasad on behalf of the Mysore Association, Mumbai- Tel.: 402 46 47
Laser Typset and Printed at Aarati Art Printers, Fort, Bombay-400 001. * Tel.: 266 33 61/266 59 38